MYSORE LEGISLATIVE ASSEMBLY

TENTH DAY.

Friday, 21st June 1957.

The House met in the Assembly Hall, Vidhana Soudha, Bangalore, at Twelve of the Clock.

MR. SPEAKER (Sri S. R. Kanthi, B.A., LL.B.) in the Chair.

LEGISLATIVE BUSINESS.

THE SECRETARY.—The Minister for Finance to move that the Mysore Agriculture Income-tax Bill, 1957, be taken into consideration.

Sri T. MARIAPPA (Minister for Finance).—Sir, I would like to move the Sales-Tax Bill first.

Mr. SPEAKER.—That may be done.

MYSORE SALES-TAX BILL, 1957.

Motion to consider.

Sri T. MARIAPPA.—Sir, I beg to move:

"That the Mysore Sales-tax Bill, 1957, be taken into consideration."

ಶ್ರೀ ಯು. ಎಂ. ಮಾದಪ್ಪ (ಚಾಮರಾಜನಗರ).—ಈಗ ತಂದಿರುವ 1957ನೆಯ ಮೈಸೂರು ಮಾರಾಟ ತೆರಿಗೆಯ (ತಿದ್ದುಪಡಿ) ಮಸೂದೆಯೊಳಗೆ ಎಲ್ಲಾ ಸ್ಟೇಟುಗಳಿಗೂ ಸಂಬಂಧಪಟ್ಟಂತೆ ಯಾವ ರೀತಿ ತೆರಿಗೆ ಇದೆ ಎನ್ನುವ ವಿಷಯದಲ್ಲಿ ಯಾವ ಅಂಶವನ್ನೂ ನಮೂದಿಸಿಲ್ಲ. ಆದ್ದರಿಂದ ಈ ಸಭೆ ಈಗ ಈ ತಿದ್ದುಪಡಿ ಮಸೂದೆಯನ್ನು ಪರ್ಯಾಲೋಚನೆಗೆ ತೆಗೆದುಕೊಳ್ಳುವುದಕ್ಕಿಂತ, ಅದರಲ್ಲಿ ಒಂದು ಯೂನಿಫಾರಂ ತೆರಿಗೆಯನ್ನು ಅಪ್ಲೈಮಾಡಿದ ಮೇಲೆ ತೆಗೆದುಕೊಳ್ಳುವುದು ಒಳ್ಳೆಯದು.

ಅಧ್ಯಕ್ಷರು.—ಈಗ ಚರ್ಚೆಗೆ ತೆಗೆದುಕೊಂಡರೆ ಏನಾಗುತ್ತದೆ?

Sri G. VENKATAI GOWDA (Palaiyam).—This bill is not on the agenda supplied to us.

Mr. SPEAKER.—It is on the agenda. Motion moved:

"That the Mysore Sales-Tax Bill, 1957, be taken into consideration."

Sri T. MARIAPPA.—Sir, the main object of the Bill is to unify the different sets of laws on sales tax in force in the new Mysore State. At present, the following laws are in operation:—

1. Mysore Area—
   (1) Mysore Sales Tax Act.
   (2) Mysore Motor Spirit (Taxation of Sales) Act.
2. Madras Area—
   (1) Madras General Sales Tax Act.
   (2) Madras Sales of Motor Spirit Taxation Act.
   (3) The Madras Tobacco (Taxation of Sales and Registration) Act.
3. Hyderabad Area—
   (1) The Hyderabad General Sales Tax Act.
   (2) The Hyderabad Sales of Motor Spirit Taxation Regulation.
4. Coorg Area—
   (1) The Coorg Sales of Motor Spirit Taxation Act.
   (2) The Coorg Sales of Tyres Taxation Act.
   (3) The Coorg Tobacco (Taxation of Sales and Registration) Act.
5. Bombay Area—
   (1) The Bombay Sales Tax Act.
   (2) The Bombay Sales of Motor Spirit Taxation Act.
   (3) The Bombay Sales of Intoxicants Taxation Act.

It has been decided to unify all these laws and to replace them by two Acts, namely, (*i*) the Mysore Sales Tax Act,

(SRI T. MARIAPPA.)

1957 and (*ii*) the Mysore Sales of Motor Spirit Taxation Act, 1957.

In bringing about uniformity, not only has the revenue aspect been taken into consideration, but also the likely repercussions of the proposed taxes on trade and commerce in the new State. Care has been taken to ensure that as a result of the taxation policy of this Government trade is not diverted outside the State. The proposed pattern of taxation takes into consideretion the practice in force in the adjoining States and the provisions of the Central Sales Tax Act, 1956.

The proposed law is intended to levy a multi-point tax on annual turnovers on the slab system indicated in Clause 5, coupled with an additional tax at specified higher rates on luxury goods mentioned in Schedule I. Certain articles essential for the life of the community listed in Schedule III have been exempted from tax whereas certain other articles listed in annexure II which are mostly exported or used as raw material in manufacture of foods are proposed to be taxed at single point only at the rates specified therein.

It is proposed to fix the minimum annual taxable turnover at Rs. 5,000 and to permit dealers having a turnover of not more than Rs. 20,000 per annum to compound the tax as set out in Clause 17 of the Bill. As provided in clause 10 of the Bill, all dealers with an annual turnover of Rs. 5,000 and above, have to get themselves registered by paying an annual fee of Rs. 6. Other dealers may, at their option, get themselves similarly registered. Only registered dealers will have the right to collect sales tax from their customers. Collection of sales tax by non-registered dealers is penalised. The Mysore State Government may, however, collect sales tax in respect of any sale of goods effected by them in the same way as a registered dealer.

Provision has also been made in clause 11 to grant licences to commission agents or brokers to buy or sell goods on behalf of known principals and for exempting the transactions of such agents or brokers from sales, if such transactions are carried on in accordance with the terms and conditions mentioned in the licence.

The tax under the Act may be paid in a lump sum or in such instalments as may be specified by the assessing authority. In default of payment, the tax outstanding may be recovered as an arrear of land revenue. When the ownership of a business changes hands, the transferer and the transferee are made jointly and severally liable to pay any tax or penalty payable in respect of such business. When a dealer dies, his executor, administrator or other legal representative is made liable to pay the tax due to Government.

Registered dealers are required to keep and maintain a true and accurate account of their transactions in Kannada, English, Hindi or Marathi or in such other language as the Government may notify, unless they are eligible to compound the tax. Every dealer whose turnover exceeds Rs. 40,000 per annum is required to issue a bill or a cash memorandum to the purchaser.

In these opening remarks, I have made it clear that the new unified sales tax legislation has been brought forward with a view to render the administration of the tax easy and less cumbersome. The Hon'ble Members are aware that at present there are different sales tax laws prevailing in the different integrating areas. In the Madras area, there is the multi-point tax where at each point of sale, sales tax is levied and passed on to the consumer. In the Bombay area, at the first point the sales tax levied is 15 pies per rupee and at the last sale again it is 6 pies per rupee. Therefore, there is double point sales tax in the Bombay area. In the Hyderabad area there is multi point sales tax. I want to make it clear that in the Madras and Hyderabad areas foodgrains are not exempted from sales tax. In the old Mysore area and Bombay area foodgrains are exempted from sales tax. As the House is aware, there is a feeling that the foodgrains should be exempted from the operation of sales tax. I would like the House to kindly consider the loss in revenue that is likely to accrue by non-levy of tax on the foodgrains in the new State

of Mysore. According to rough estimate of the probable income from the existing sales tax on foodgrains both in the Madras and Hyderabad areas, the loss will be to the extent of 28 to 30 lakhs. Therefore, keeping in view the loss of revenue and the probable repercussions in the sale prices of foodgrains if it is not to levy sales tax on foodgrains, the Government have decided,at least for the time being, till the prices stabilise themselves to exempt from the operation of the uniform law the foodgrains, namely, wheat, jawar, ragi, sajji, navane, jola and other minor millets. Therefore, according to the rough estimate under the new Sales-Tax law, the probable loss would be in the order of Rs. 75 lakhs. It is therefore for the consideration of the House whether any arguments should be advanced on that score. The Government are fully aware of the repercussions it will have on the prices of foodgrains if they are exempted from the operation of the new Sales Tax Law though in the draft Bill presented to the House, they are included. At the same time I want to make it clear that unlike to the levy of sales tax either in the Madras or Hyderabad area, in Mysore we have proposed to levy sales tax on turnover. There is one advantage in adopting turnover system and it is also stipulated in the new Bill that the sales tax collected on the turnover cannot be passed on to the consumer. There is a definite provision that the sales tax collected on the turnover—it is a very light sales tax—it being so—should not be passed on to the consumer. Only the sales tax levied at a single point and the sales tax levied on luxury articles can be passed on to the consumer. With this safeguard I believe that the sales tax proposed to be levied on the turnover in the proposed Bill will not be very heavy and it will not affect the consumers very much.

I would like to state for the benefit of the House the relevant provisons of the different systems of sales tax in force in the respective integrating areas. "In the Mysore area, under the Mysore Sales Tax Act, 1948, general sales tax is levied. It is a combination of single point and multi-point sales tax. We have taken the financial year as from 1st April to 31st March, but for purposes of assessment we have given the option to the dealer so that he can adopt a different assessment year with the permission of the department. We have given this option because several merchants have adopted different financial years.

Most of the provisions of the old Mysore State Act are also found in the different enactments in force in the different areas. We have thought over the respective provisions in the different Acts and we have adopted a very simple measure whereby it will be easy for the department to administer and also for the dealers and merhants to pay their sales tax. We have also introduced a new provision in the Sales Tax Bill that any dealer whose turnover is Rs. 30,000 is given the option to compound and give the tax. Only on those persons whose turnover is over Rs. 30,000 there is a liability to issue cash bills and cash memo.

In the present Bill the House will see that in respect of small dealers, dealers who deal in goods from Rs. 5,000 to 15,000 a tax of ½ per cent is proposed; from Rs. 15,000 to 30,000, tax of 1 percent and above Rs. 30,000 a tax of 2 per cent is, proposed to be levied. This turnover tax, as I have already stated, cannot be passed on to the consumer and there are enough safeguards to see that it is not passed on to the consumer.

I have briefly indicated the aspects of different Sales Tax Acts; and how it operates in Bombay, Madras, Hyderabad, and old Mysore. In the new Act we have taken the most useful points from all the enactments.

Sri G. SIVAPPA (Chitaldrug).—All points favourable to the Government.

Sri T. MARIAPPA.—All feasible points have been taken and combined into one.

If the Hon'ble Member has studied the old Mysore Act, he will know that it had been evolved after a great deal of experience. In Mysore we have had a Committee and on the suggestion of that Committee we wanted to make the levy of sales tax very simple. Supposing we had adopted the system of

(SRI T. MARIAPPA.)

Madras, the income would be very much but it would have caused a lot of harassment and at every point there would have been evasion and even corruption. We want to prevent such things. Therefore we have adopted a very simple thing of levying sales tax on the turnover, single point tax and tax on luxury goods. The measure we have proposed is a safer one from the point of view o small dealers and they can pay the tax either in a lumpsum or in instalments and they are not required to maintain elaborate accounts or not are they required to fill in a number of forms as is the practice in Bombay. Therefore, there is a great advantage in the new system to the small dealers. They need not maintain any accounts but they will be required to show only vouchers for the purchase and sales of goods and on that basis turnover tax will be calculated.

Therefere, so far as small dealers are concerned, who may not be able to employ clerks, there is a great abvantage in adopting the new taxation. Only those people whose turnover is more than Rs. 40,000 will be required to issue cash bills and keep proper accounts. Because they will have to pay income tax also, naturally, they will have to keep proper accounts and it will not be a heavy burden on those people. In view of the exemption of foodgrains from the operation of this Tax, I hope the House will accept this Bill.

ಶ್ರೀ ಯು. ಎಂ. ಮಾದಪ್ಪ.—Point of Order ಯಾವ ಮಸೂದೆಯನ್ನು ಸಭೆಯಲ್ಲಿ ಮಂಡಿಸ ಬೇಕಾದರೂ, ಆ ಮಸೂದೆಯನ್ನು ಪ್ರತಿಯೊಬ್ಬ ಮಾನ್ಯ ಸದಸ್ಯರಿಗೂ ಮೂರು ದಿವಸ ಮುಂಚಿತ ವಾಗಿಯೇ ಕೊಡಬೇಕಾಗಿತ್ತು. ಆದರೆ ಮಾರಾಟ ತೆರಿಗೆಯ ಮಸೂದೆಯನ್ನು ನಿನ್ನೆಯ ದಿವಸ ಮಾತ್ರ ತಲುಪಿಸಿದ್ದಾರೆ. ಓದಲು ಸಾಕಾದಷ್ಟು ಸಮಯ ವಿಲ್ಲ. ಹೊಸದಾಗಿ ಮೈಸೂರಿಗೆ ಸೇರಿದ ಇತರ ಸಂಸ್ಥಾನಗಳ ಭಾಗಗಳಲ್ಲಿ ಜಾರಿಯಲ್ಲಿರುವ ಸೇಲ್ಸ್ ಟ್ಯಾಕ್ಸ್ ಆಕ್ಟುಗಳನ್ನೂ ಸಹ ನಮ್ಮ ಮುಂದೆ ಕೊಡದ ಪ್ರಯುಕ್ತ ಈ ಮಸೂದೆಯನ್ನು ಮಂಡಿಸಲು ಸಾಧ್ಯ ವಿಲ್ಲವೆಂದು ಕ್ರಿಯಾಲೋಪವೆತ್ತಿ ತಮ್ಮ ಅಭಿಪ್ರಾಯ ವನ್ನ ಕೇಳುತ್ತೇನೆ.

ಅಧ್ಯಕ್ಷರು.—ಯಾವುದೊಂದು ಮಸೂದೆಗೂ ಮೂರು ದಿವಸಗಳ ನೋಟೀಸ್ ಬೇಕು ಎನ್ನುವುದರ ವಾದ ಇಲ್ಲ. ಈಗ ಏನಾಗಿದೆ ಎಂದರೆ ನಿನ್ನೆಯ ದಿವಸ ವಿರೋಧ ಪಕ್ಷದ ನಾಯಕರು ಮತ್ತು ಪ್ರಭುತ್ವ ಪಕ್ಷದ ನಾಯಕರು ಇಬ್ಬರೂ ಮಾತನಾಡಿ ಈ ಮಸೂದೆಯನ್ನು ಚರ್ಚೆಗೆ ತೆಗೆದುಕೊಳ್ಳಬಹುದು ಎಂದು ಒಪ್ಪಿಕೊಂಡರು. ಅದರ ಮೇಲೆ ತೆಗೆದು ಕೊಂಡಿದೆ. ಆದು "ಮನಿ ಬಿಲ್" ಮೊದ ಮೊದಲು ತಮ್ಮ ತಮ್ಮಲ್ಲೇ ಮಾತನಾಡಿಕೊಂಡಿದ್ದರಿಂದ ತೆಗೆದುಕೊಂಡಿದ್ದಾರೆ. ಮೊದಲೇ ಮೂರು ದಿವಸಗಳ ನೋಟೀಸ್ ಸಂಪೂರ್ಣವಾಗಿ ಬೇಕು ಎಂದಿದ್ದರೆ ಈ ಮಸೂದೆಯನ್ನು ಚರ್ಚೆಗೆ ಈಗ ತೆಗೆದು ಕೊಳ್ಳುತ್ತಿರ ಲಿಲ್ಲ.

*ಶ್ರೀ ಕೆ. ಕೆಂಚಪ್ಪ (ಹಿರಿಯೂರು).—ನಿನ್ನೆಯ ದಿವಸ ನಾವು ಮತ್ತು ನಮ್ಮ ಹೌಸ್ ಲೀಡರ್ ಮಾತನಾಡಿ ದಾಗ ಇಂಥಿಂಥ ಬಿಲ್‌ಗಳಿವೆ ಎನ್ನುವುದನ್ನು ಅವರು ಹೇಳಲಿಲ್ಲ. ಅಪ್ಪ್ರಷಾರ್ ರೀಚಿಂಗ್ ಕಾನ್ಸಿಕ್ವೆನ್ಸಸ್ ಉಳ್ಳ ಬಿಲ್ಲುಗಳಿವೆಯೆಂದು ನಾನು ತಿಳಿದುಕೊಳ್ಳಲಿಲ್ಲ. ಅವು ಫಾರ್‌ಮಲ್ ಆಗಿವೆ ಎಂದು ಹೇಳಿದ್ದರಿಂದ ಬಿಲ್ಲು ಗಳನ್ನು ಪಾಸುಮಾಡೋಣವೆಂದು ಹೇಳಿದ್ದೆವು. ಆದರೆ ಈಗ ನೋಡುವುದರಲ್ಲಿ ಫಾರ್‌ಮಾಲಿಟೀಸ್ ಅಬ್ಸರ್ವ್ ಮಾಡಬೇಕಾಗುತ್ತದೆ. ಇಲ್ಲದೆಹೋದರೆ ಸ್ವಲ್ಪ ತೊಂದರೆಯಾಗುತ್ತದೆ. ಸಣ್ಣ ಸಣ್ಣ ಬಿಲ್ಲುಗಳು ಇದ್ದರೆ ಪಾಸುಮಾಡೋಣ ಎಂದು ನಾವು ಹೇಳಿದ್ದು ಉಂಟು. ದೊಡ್ಡ ದೊಡ್ಡ ಬಿಲ್ಲುಗಳು ಇವೆಯೆಂದು ಹೇಳಿದ್ದರೆ ಆಲೋಚನೆಮಾಡುತ್ತಿದ್ದೆವು. ಆದಕಾರಣ ದೇಶದ ಹಿತದೃಷ್ಟಿಯಿಂದ, ವ್ಯಾಪಾರದ ದೃಷ್ಟಿಯಿಂದ ಮತ್ತು ದೊಡ್ಡ ಪ್ರಮಾಣದ ದುಡ್ಡಿನ ಸಂಬಂಧದಲ್ಲಿ ಈ ಮಸೂದೆಗಳು ಬಂದಿರುವುದರಿಂದ, ಸರಿಯಾದ ಕ್ರಮ ತೆಗೆದುಕೊಳ್ಳದೆ ಅವುಗಳನ್ನು ಪಾಸು ಮಾಡುವುದಕ್ಕೆ ಕಷ್ಟವಾಗುತ್ತದೆ. ಅದಕ್ಕೋಸ್ಕರ ಈಗಲೂ ಸಹ ಯೋಚನೆಮಾಡಿ ಇವನ್ನು ಮುಂದಕ್ಕೆ ಹಾಕಿದರೆ ಒಳ್ಳೆ ಯದು ಕೆಲವು ಸಣ್ಣ ಬಿಲ್ಲುಗಳು ಬರುತ್ತವೆ, ಫಾರ್ಮಲ್ ಆಗಿವೆ, ಎಂದು ಹೇಳಿದ್ದರಿಂದ ನಾವು ಒಪ್ಪಿಕೊಂಡಿರು ವುದು ಉಂಟು. ಆದರೆ ಈ ಪ್ರಮಾಣದಲ್ಲಿ ಇದೆ ಯೆಂಬುದು ಗೊತ್ತಿದ್ದರೆ ಒಪ್ಪಿಕೊಳ್ಳುವುದಕ್ಕೆ ಸಾಧ್ಯ ವಿರಲಿಲ್ಲ. ಈಗಲೂ ಆಲೋಚನೆಮಾಡಿ ಅವನ್ನು ಮುಂದಕ್ಕೆ ಹಾಕುವುದು ಸೂಕ್ತವೆಂದು ಕಾಣುತ್ತದೆ.

ಶ್ರೀ ಎ. ಭೀಮಪ್ಪನಾಯಕ್ (ಚಳ್ಳಕೆರೆ).—ವಿರೋಧ ಪಕ್ಷದ ನಾಯಕರಾದ ಶ್ರೀ ಕೆಂಚಪ್ಪನವರು ಹೇಳಿದ್ದನ್ನು ಕೇಳಿದೆ. ಈ ಬಿಲ್ಲು ಆಗಲೇ ಇಂಟರ್‌ಡ್ಯೂಸ್ ಆಗಿತ್ತು. ಹೊಸದಾಗಿ ಬಂದಿದೆ ಎನ್ನುವ ಅಭಿಪ್ರಾಯ ಸರಿಯಲ್ಲ. ಬಿಲ್ಲುಗಳನ್ನು ಚರ್ಚೆಗೆ ತೆಗೆದುಕೊಳ್ಳುವ ವಿಷಯ ಮಾತನಾಡಿದ್ದರು. ಹೆನರು ಹೇಳದೆ ಇರಬಹುದು ಎಂಬುದನ್ನು ಒಪ್ಪಿಕೊಳ್ಳುತ್ತೇನೆ. ಎರಡನೆಯದು ಕನ್ಸಿಡರೇಷನ್ನಿಗೆ ತೆಗೆದುಕೊಳ್ಳುವುದು ಒಂದೇ ಬಿಲ್ಲು. ಇದರಿಂದ ರಿಪರ್‌ಕಷನ್ ಆಗುತ್ತದೆಯೆಂದು ಹೇಳಿದರು. ಸೇಲ್ಸ್‌ಟ್ಯಾಕ್ಸ್ ಆಕ್ಟು ಹೊಸದಾಗಿ ತಂದದ್ದು ಅಲ್ಲ; ಸೇಲ್ಸ್‌ಟ್ಯಾಕ್ ಆಕ್ಟು ಇದೆ. ಐದು ಪ್ರದೇಶಗಳ ಎಲ್ಲ ಕಾನೂನುಗಳನ್ನೂ ಇಂಟಗ್ರೇಟ್ ಮಾಡಿ ಒಂದು ಯೂನಿಫಾರಂ ಮಸೂದೆ ತಂದಿರುವುದೇ ಹೊರತು ಮತ್ತೆ ಬೇರೆ ಅಲ್ಲ. ಅದರಲ್ಲಿ ದೊಡ್ಡರಿಪರ್‌ಕಷನ್ ಗಳು ಇಲ್ಲ. ಈ ಹೊತ್ತು ಪುಡ್‌ಗ್ರೈನ್ಸ್ ವಿಷಯ ವನ್ನು ಕುರಿತು ಶ್ರೀ ಮರಿಯಪ್ಪನವರು ಹೇಳಿದರು. ಇದರಿಂದ ಬಡವನಿಗೆ ಹೊರೆ ಹೆಚ್ಚಾಗಿದೆ ಎಂದು ಹೇಳಿದ್ದಾರೆ. ಇದು ಬಹಳ ಮುಖ್ಯವಾದುದು. ಇದನ್ನು ನಾವು ಆಲೋಚನೆಮಾಡಿ ನಮ್ಮ ಅಭಿಪ್ರಾಯ ಗಳನ್ನು ತಿಳಿಸಿದ್ದೇವೆ. ಹೈದ್ರಾಬಾದ್ ಮತ್ತು ಮದ್ರಾಸ್ ಭಾಗಗಳಿಂದ ಇಗ 25 ಲಕ್ಷ ರೂಪಾಯಿಗಳು ಬರುತ್ತವೆ. ಇದನ್ನು ತೆಗೆಯುವುದರಿಂದ ರಿಪರ್‌ಕಷನ್ ಆಗುತ್ತದೆ. ಇದನ್ನು ಚರ್ಚೆಮಾಡಲು ಇನ್ನೂ ಎರಡು ದಿವಸಗಳ ಕಾಲ ಇದ್ದೇಇದೆ. ಎಷ್ಟು ಬಿಲ್ಲುಗಳನ್ನು

*Asterisk indicates that the remarks or speeches have not been revised by the Member concerned.

ಚರ್ಚೆಮಾಡುವುದಕ್ಕೆ ಸಾಧ್ಯವೋ ಅಷ್ಟನ್ನು ಮುಗಿಸೋಣ. ಎಲ್ಲ ಬಿಲ್ಲುಗಳನ್ನೂ ಆಲೋಚನೆಗೆ ತೆಗೆದುಕೊಳ್ಳಬೇಕು ಎಂದಲ್ಲ. ಆದ್ದರಿಂದ ಶ್ರೀ ಕೆಂಚಪ್ಪ ಅವರು ಮುಂದಾಲೋಚನೆಮಾಡಿ ಈ ಬಿಲ್ಲುಗಳನ್ನು ಆಲೋಚನೆಗೆ ತೆಗೆದುಕೊಳ್ಳುವುದಕ್ಕೆ ಅವಕಾಶ ಕಲ್ಪಿಸಬೇಕು. ಎಲ್ಲರೂ ಸೌಹಾರ್ದ ಭಾವನೆಯಿಂದ ಚರ್ಚೆಯನ್ನು ಮುಗಿಸೋಣ. ಎರಡನೆಯದು ಸೇಲ್ಸ್ ಟ್ಯಾಕ್ಸ್ ವಿಷಯವನ್ನು ಸೆಂಟ್ರಲ್ ಗೌರ್ನಮೆಂಟಿನವರು ಫಸ್ಟ್ ಜುಲೈನಿಂದ ಜಾರಿಗೆ ತರುತ್ತಾರೆ. ಆಗ ಸೇಲ್ಸ್‌ಟ್ಯಾಕ್ಸ್ ಆಕ್ಟಿಗೆ ಸೂಟಬಲ್ ಅಮೆಂಡ್‌ಮೆಂಟ್ ಆಗುತ್ತದೆ. ಆಗ ನಾವು ಇಲ್ಲಿ ಸೂಕ್ತ ಬದಲಾವಣೆ ಮಾಡಿಕೊಳ್ಳಬೇಕು ಎಂದು ತಿಳಿಸಿದ್ದಾರೆ. ಅದನ್ನು ಈಗ ಮಾಡಬೆ ಇದ್ದರೆ ಮುಂದೆ ಯಾವ ತಾರೀಖಿನಿಂದ ಜಾರಿಗೆ ಕೊಡಬೇಕು, ರೆಟ್ರಾಸ್ಪೆಕ್ಟೀವ್ ಎಫೆಕ್ಟಿನಿಂದ ಕೊಡುವುದಕ್ಕೆ ಅವಕಾಶವಿದೆಯೇ ಮುಂತಾಗಿ ತೊಂದರೆಗಳು ಬರುತ್ತವೆ. ಆದ್ದರಿಂದ ವಿರೋಧ ಪಕ್ಷದ ನಾಯಕರು ಮತ್ತು ಅವರ ಪಾರ್ಟಿಯವರು ಈ ಬಿಲ್ಲನ್ನು ಚರ್ಚೆಗೆ ತೆಗೆದುಕೊಳ್ಳಲು ಒಪ್ಪಿಕೊಳ್ಳಬೇಕು. ಸೇಲ್ಸ್‌ಟ್ಯಾಕ್ಸ್ ಬಿಲ್ಲು ಒಂದನ್ನು ಮುಗಿಸೋಣ. ಒಟ್ಟಿಗೆ ಸೌಹಾರ್ದದಿಂದ ಪ್ರಯತ್ನ ಮಾಡುವುದರಲ್ಲಿ ಏನೂ ತೊಂದರೆಯಾಗಲಾರದು; ಈ ಒಂದು ಬಿಲ್ಲನ್ನು ಮುಗಿಸುವುದು ಅಗತ್ಯ ಎಂದು ನನ್ನ ಅಭಿಪ್ರಾಯ. ಇದು ಹೊಸದಾಗಿ ತಂದದ್ದು ಅಲ್ಲ. ಇಂಟರ್‌ಡ್ಯೂಸ್ ಆಗಿದೆ. ಇದನ್ನು ಚರ್ಚೆಗೆ ತೆಗೆದುಕೊಳ್ಳಲು ಅನುಮತಿಯನ್ನು ಕೊಡಬೇಕು.

Sri V. SRINIVASA SHETTY (Coondapur).—It is not our intention to oppose the Bill as such on principle. When the Hon'ble Member Sri Bheemappa Naik said that it had been introduced, we were taken by surprise. It was only yesterday we came to know that more than half a dozen Bills were being dumped into the Assembly for discussion. My friend Sri. Madappa read the rule which says that three days before the date of discussion in this House, copies of Bills have to be given. Protests were made in this House yesterday that copies were not delivered and it was admitted that they were not printed. Some of us have gone to the Notice Room to get information, but we did not know which Bill was going to be introduced. How are we to know which Bill is going to be introduced? As Sri. Bheemappa Naik said, it may be an important Bill and it may be a healthy Bill. But unless we go through the Bill, what are we to tell our people in the constituency what Bill was passed and what were the provisions of the Bill. Are we go blind-folded? Within two or three days, we are going back to our constituencies. The Minister was pleased to say that the provisions were good. He said something which we could not understand because we have not gone through the Bill at all. No opportunity was given and none of us had seen the Bill till 12 O'clock. I was going through several Bills to draft amendments.

12-30 P.M.

In the circular that I received no mention had been made about this. Are we to be hustled like this? Are we not here to protect our interests and the interests of the people in this regard? We simply crave your indulgence in this respect and request you to see that we are given proper opportunity to discuss the Bill thoroughly. We are not going to oppose the Bill for the sake of opposition in this House. We are prepared to consider the Bill clause—by—clause. So we request that it may be taken up tomorrow or the day after and referred to a Select Committee after general discussion. We are not afraid of the flu. Who asked for adjournmet because of the flu? We are prepared to sit here till the Bills are fully discussed and passed. So we want the protection of the Chair in this matter to discuss the Bill thoroughly.

***Sri V. S. PATIL** (Belgaum I).—Sir, when I received today's List of Business at 9-30 in the morning I found that this Bill had been put down for being passsed. In Circular No. 27 that was given to us on the 19th there is no mention of this Bill coming up for discussion. When we tried to get copies of this Bill after receiving today's List of Business we could not get copies. As, according to the list supplied to us previously, other Bills were to be discussed, we were reading those Bills. When I received today's List of Business and found this Bill in it I tried to read it, but I found that I had no copy of it with me. It is only now that I could get a copy of it. Under the cirumstances it will be very difficult to discuss this Bill at this stage. I must confess that I have not read even a single line in this Bill. This is a Bill under which the largest income of the State is to come. Sales tax brings the largest amount of revenue to Government. So it is our duty to see whether the clauses have been properly

(SRI V. S. PATIL.)

drafted or not and whether there are any loopholes left. We donot object to the passing to this Bill but we only say that it should not be passed in such a hurry. So I submit that the consideration of this Bill may be postponed for a few days in order to enable us to study the provisions of this Bill and suggest appropriate amendments to the various clauses.

ಶ್ರೀ ಜಿ. ವೆಂಕಟೇಗೌಡ (ಪಾಳ್ಯಂ).—ಸ್ಪ್ಯಾಮಿ, ನನ್ನ ಮಾನ್ಯ ಮಿತ್ರರು ಹೇಳಿದ ಹಾಗೆ ನಿನ್ನೆತಾನೆ ಇದನ್ನು ಸಭೆಯ ಮುಂದೆ ಮಂಡಿಸಿದ್ದಾರೆ. ಮಸೂದೆಯ ಪ್ರತಿಗಳು ಕೂಡ ಈಗ ತಾನೆ ನಮ್ಮ ಹಸ್ತಗತವಾಗಿವೆ. ಇದನ್ನು ಚೆನಾ ಗಿ ಪರಿಶೀಲನೆಮಾಡಿ ತಿದ್ದುಪಡಿಗಳನ್ನು ಕಳುಹಿಸುವುದಕ್ಕೆ ಸಾಧ್ಯವಾಗಬಹುದೇ ಇಲ್ಲವೇ ಎಂಬುದನ್ನು ಯೋಚನೆ ಮಾಡುವುದಕ್ಕೆ ಕೂಡ ಸಾಧ್ಯವಿಲ್ಲ. ಆದ್ದರಿಂದ ನಮ್ಮನ್ನೆ ವಿರೋಧಿಸಬೇಕೆಂದು ಹೇಳಿ ಈ ರೀತಿ ಹೇಳುತ್ತಿಲ್ಲ. ವಿರೋಧ ಪಕ್ಷದ ನಾಯಕರು ಒಪ್ಪಿದರೆಂಬ ಕಾರಣದ ಮೇಲೆ ಇದನ್ನು ಸರ್ಕಾರದವರು ತಂದಿದ್ದಾರೆ. ಅವರ ಪಕ್ಷವಷ್ಟೇ ಅಲ್ಲದೆ ಇನ್ನೂ ಇತರರು ಸ್ವತಂತ್ರರೂ ಈ ಸಭೆಯಲ್ಲಿರುವುದನ್ನು ತಾವು ಗಮನಕ್ಕೆ ತೆಗೆದುಕೊಳ್ಳಬೇಕು. ಆದ್ದರಿಂದ ಅವರೇನು ಹೇಳಿಕೆ ಕೊಟ್ಟರೋ ಅದು ನಮಗನ್ವಯಿಸುವುದಿಲ್ಲ. ಮತ್ತು ಜನರ ಹಿತವನ್ನು ನಾವು ನಿಜವಾಗಿ ಸಾಧನೆ ಮಾಡುವುದಾದರೆ ಅದಕ್ಕೆ ಸರಿಯಾದ ಅವಕಾಶವನ್ನು ಕಲ್ಪಿಸಿಕೊಡುವುದೂ ತಮ್ಮ ಕರ್ತವ್ಯ. ಈ ದೃಷ್ಟಿಯಿಂದ ಈ ಮಸೂದೆಯನ್ನು ನಾಳೆ ಅಥವಾ ನಾಳೆದ್ದು ಚರ್ಚೆಗೆ ತೆಗೆದುಕೊಳ್ಳಬೇಕೆಂದು ನಾನು ಸೂಚಿಸುತ್ತೇನೆ.

ಶ್ರೀ ಯು. ಎಂ. ಮಾದಪ್ಪ.—ಶ್ರೀವರ್ಮಾ ಭೀಮಪ್ಪ ನಾಯಕರು ಹೇಳುತ್ತಾ, ಈ ಬಿಲ್ಲು introduce ಆಗಿ ಈಗ discussion stageಗೆ ಬಂದಿದೆ, ಈ ಕಾಲದಲ್ಲಿ ಇದನ್ನು ಚರ್ಚೆಗೆ ತೆಗೆದುಕೊಳ್ಳುವುದನ್ನು object ಮಾಡುವುದು ಸರಿಯಲ್ಲವೆಂದು ತಿಳಿಸಿದರು. 153 ನೆಯ ನಿಯಮವನ್ನು ನಾನು ಅವರ ಗಮನಕ್ಕೆ ತರಬಯಸುತ್ತೇನೆ. ಅದರ ಪ್ರಕಾರ consideration stage ನಲ್ಲಿಯೂ ಕೂಡ ಯಾವ ಸದಸ್ಯರಾದರೂ ಬಿಲ್ಲನ್ನು oppose ಮಾಡಬಹುದಾದಂಥ ಅವಕಾಶವಿದೆ.

*Sri N. RACHIAH (Hunsur—S.C.).—As these are important Bills, I agree that it is very desirable that more time should be given to Hon'ble Members to discuss them, but Hon'ble Members are aware that the House is going to be adjourned shortly as per the desire of a majority of the members of this House. That has been announced by you also. Therefore, the time at the disposal of the Government is very short, because this measure is to take effect from 1st July 1957. Also, this is not a very complicated Bill as I could see it. This Sales Tax Bill of 1957 is only an amending consolidating measure of the five sets of laws prevailing in the different parts of the State. As such, there are no new principles involved. So I appeal to Hon'ble Members to see that this Bill is considered and passed today.

*ಶ್ರೀ ಎಚ್. ವಿ. ಕಾಜಲಗಿ (ಸಂಪಗಾಂವ್ I).—ಈಗ ಈ ಸಭೆಯ ಮುಂದೆ ಸೇಲ್ಸ್‌ಟ್ಯಾಕ್ಸ್ ಬಿಲ್ ಬಂದಿದೆ. ಇದೊಂದು ದೊಡ್ಡ ಬಿಲ್ಲು. ಕೇವಲ ತಿದ್ದುಪಡಿಯ ಮಸೂದೆಯಾದರೂ ಐದಾರು ಸಂಸ್ಥಾನಗಳಿಗೆ ಸಂಬಂಧಿಸಿದ ಭಾಗಗಳಲ್ಲಿ ಜಾರಿಯಲ್ಲಿದ್ದ ಕಾನೂನುಗಳಿಗೆ ಸಂಬಂಧಪಟ್ಟ ಬಿಲ್ ಆಗಿದೆ. ಇದರ ಪ್ರತಿಗಳೂ ಕೂಡ ಸರ್ಕಾರದ ಮುದ್ರಣಾಲಯದಿಂದ ಈಗ ತಾನೆ ಬಂದುದಾಗಿ ಸದಸ್ಯರು ಅದನ್ನು ಓದುವುದಕ್ಕೆ ಕೂಡ ಸಾಧ್ಯವಾಗಿಲ್ಲ. ಇದನ್ನು ಓದಿದ್ದಲ್ಲಿ ಸದಸ್ಯರು ತಮ್ಮ ತಮ್ಮ ಅಭಿಪ್ರಾಯವನ್ನು ಸಭೆಯ ಮುಂದಿಡುವುದಕ್ಕೆ ಅವಕಾಶವಿತ್ತು. ಆದರೆ ಮಾನ್ಯ ಮಂತ್ರಿಗಳು ಜುಲೈ ಒಂದನೆಯ ತಾರೀಖಿನಿಂದ ಕೇಂದ್ರದ ಬಿಲ್ಲು ಜಾರಿಗೆ ಬರಲಿರುವುದರಿಂದ ಅಷ್ಟರೊಳಗೆ ಈ ಬಿಲ್ಲನ್ನು ನಾವು ಪಾಸ್ ಮಾಡಬೇಕಾಗಿದೆಯೆಂದು ಹೇಳಿದ್ದಾರೆ. ಎರಡನೆಯದಾಗಿ ಫ್ಲೂ ಹಾವಳಿಯಿಂದ ಈ ಸಭೆಯನ್ನು adjourn ಮಾಡಬೇಕಾಗಿ ಬೇರೆ ಬಂದಿದೆ. ಇಂಥ ಸಂದಿಗ್ಧ ಪರಿಸ್ಥಿತಿಯಲ್ಲಿರುವುದರಿಂದ, by way of compromise ಎನ್ನುವಂತೆ, ನಾಳೆಯ ದಿವಸದ ವರೆಗೆ ಅವಕಾಶಕೊಟ್ಟು ನಾಳೆ ಈ ಬಿಲ್ಲನ್ನು ತೆಗೆದುಕೊಳ್ಳಬೇಕೆಂದು ನಾನು ಸೂಚಿಸುತ್ತೇನೆ. ಈಗ ಬೇರೆ ಯಾವುದಾದರೂ ಬಿಲ್ಲನ್ನು ತೆಗೆದುಕೊಳ್ಳಬಹುದೆಂದು ನನ್ನ ಸೂಚನೆ.

Sri T. MARIAPPA.—I have no objection to allow time for the Hon'ble Members opposite.

Sri U. M. MADAPPA.—We would like to have the ruling of the Chair on this point.

Mr. SPEAKER.—I have already stated that this was as arranged between the Government and the Leader of the Opposition. The Leader of the Opposition now says that he was not aware that so much was involved. I can understand the difficulty of the Leader of the Opposition. Some sort of indication of these Bills was given yesterday, but, unfortunately, the Leader of the Opposition was not conscious of the implications. Mention had been made about these Bills in the Budget speech also. I could see that the Leader of the Opposition did not fully realise the implications of these Bills. Perhaps, he was in a good mood and he missed the whole thing. Now we have to find out a way to overcome the difficulty. The Bill has been introduced and the Finance Minister has made a speech also. So I would like to know what the House wants to do now.

*ಶ್ರೀ ಬಿ. ಕೆ. ಪುಟ್ಟರಾಮಯ್ಯ (ಚನ್ನಪಟ್ಟಣ).— ಸ್ವಾಮಿ, ತಮಗೆಲ್ಲ ಗೊತ್ತಿರುವ ಹಾಗೆ ನಾವೆಲ್ಲ ಎಂದರೆ ಈ ಸಭೆಯ ಕೆಲವು ಸದಸ್ಯರು ಕಾಯಿಲೆಯಿಂದ ನರಳುತ್ತಿದ್ದೇವೆ. ಇದು ಮಾನ್ಯ ಮಂತ್ರಿಗಳಿಗೂ ಗೊತ್ತೇ ಇದೆ ಮತ್ತು ತಮಗೂ ಗೊತ್ತಿದೆ. ಈಗ ಬಂದಿರುವುವು ಮನಿ ಬಿಲ್ಲುಗಳು. ಇವುಗಳನ್ನು ನಾವು ಇನ್ನೂ ಸರಿಯಾಗಿ ಓದಿಲ್ಲ ಮತ್ತು ಈಗಿನ ಪರಿಸ್ಥಿತಿಯಲ್ಲಿ ನಮಗೆ ಮಾತನಾಡುವ ಶಕ್ತಿ ಕೂಡ ಇಲ್ಲ. ಅಲ್ಲದೆ ಈ ಸಭೆಗೆ ಬಂದು ನಾವು ಕುಳಿತು ಕೆಲಸ ಮಾಡುವುದಕ್ಕೂ ಆಗುತ್ತಿಲ್ಲ. ಹೀಗಿರುವಾಗ ಈ ಮನಿಬಿಲ್ಲುಗಳನ್ನು ಇಷ್ಟೊಂದು ಅವಸರವಾಗಿ ನಮ್ಮ ಹಣ ಕಾಸಿನ ಸಚಿವರು ಅವರ ಜವಾಬ್ದಾರಿ ಕಳೆದುಕೊಳ್ಳುವುದಕ್ಕಾಗಿ ಏನೋ ಅಲ್ಲಷ್ಟು, ಇಲ್ಲಷ್ಟು ಕೊಟ್ಟು "ಕೋತಿ ಕಜ್ಜಾಯದ ಲೆಕ್ಕ ಮಾಡಿದ ಹಾಗೆ" ಮಾಡುವಷ್ಟು ಸುಲಭವಲ್ಲ. ಸಚಿವರಿಗೇನೋ ಇದು ಬಹಳ ಸುಲಭವಾಗಿರಬಹುದು. ಆದರೆ ಇಷ್ಟು ಅವಸರವಾಗಿ ಏಕೆ ಹೀಗೆ ಬಿಲ್ಲುಗಳನ್ನು ತರಬೇಕೆಂದು ಪ್ರಶ್ನಿಸಬೇಕಾಗಿದೆ.

ಅಧ್ಯಕ್ಷರು.—ನಾನು ಕೋತಿ ಕಜ್ಜಾಯ ಹಂಚುವಂತೆ ಮಾಡಲು ಅವಕಾಶ ಕೊಡುವುದಿಲ್ಲ, ಸ್ವಾಮಿ. I may tell the Hon'ble Member that I am here to protect the rights of Hon'ble Members. I am very anxious to do it.

Sri B. K. PUTTARAMIYA.—I am referrring to the Tresury Benches. ಅಧ್ಯಕ್ಷರ ಮೇಲೆ ಹೇಳಬೇಕಾದ ಪ್ರಮೇಯವೇ ನಿಲ್ಲ. ತಮ್ಮ ವಿಷಯವಾಗಿ ತಮ್ಮನ್ನು ಚುನಾವಣೆಯಾದ ಮೊದಲನೆಯ ದಿವಸವೇ ಹೇಳಿದ್ದೇನೆ. ನಾನು ಹೇಳುತ್ತಿರುವುದು ಈಗ ಮಾನ್ಯ ಶ್ರೀ ಭೀಮಪ್ಪನಾಯಕರವರು ನಮ್ಮ ಸರ್ಕಾರಕ್ಕೆ ಸುಮಾರು 25 ಸಾವಿರ ರೂಪಾಯಿಗಳು ಬರಬೇಕಾಗಿದೆ ಮತ್ತು ಬೇರೆ ಬೇರೆ ಭಾಗಗಳಲ್ಲಿ ಬೇರೆ ಬೇರೆ ರೀತಿಯ ಕಾನೂನುಗಳಿರುವುದರಿಂದ ನಾವು ಈಗ ಅದನ್ನೆಲ್ಲ ಒಂದು ಗೂಡಿಸಿ ಒಂದು ಬಿಲ್ಲನ್ನು ತಂದಿದ್ದೇವೆ ಎಂದರು.

ಶ್ರೀ ಎ. ಭೀಮಪ್ಪನಾಯಕ್.—25 ಸಾವಿರವಲ್ಲ. 25 ಲಕ್ಷ ರೂಪಾಯಿಗಳು ಎಂದು ಹೇಳಿದೆ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ನನ್ನ ಕಿವಿಗೆ 25 ಸಾವಿರ ಎಂದು ಕೇಳಿಸಿತು. 25 ಲಕ್ಷ ಎಂದು ಕೂಡ ಕೇಳುವಷ್ಟು ಶಕ್ತಿ ನಮ್ಮಲ್ಲಿಲ್ಲ ಎಂದು ಹೇಳಿದೆ. ಅದಕ್ಕೊಸ್ಕರ ಈ ರೀತಿಯಾಗಿ ನಮ್ಮ ದೇಶಕ್ಕೆ ಬರಬೇಕಾದ ಹಣವನ್ನು ಕಡಮೆ ಮಾಡಬೇಕೆಂದೇನೂ ಹೇಳುತ್ತಿಲ್ಲ ಮತ್ತು ಆ ರೀತಿ ನಾವು ಒಪ್ಪುವುದಕ್ಕೂ ಆಗುವುದಿಲ್ಲ. ಮತ್ತು ವಿರೋಧ ಪಕ್ಷದಲ್ಲಿದ್ದೇವೆಂದು ಸುಮ್ಮನೆ ಏನೂ ಅಭಿಪ್ರಾಯಗಳನ್ನು ತಿಳಿಸದೆ ವಿರೋಧ ಮಾಡುವುದು ಸರಿಯಾದುದಲ್ಲ. ಶ್ರೀ ಭೀಮಪ್ಪನಾಯಕರು ನಮ್ಮ ವಿರೋಧ ಪಕ್ಷದ ನಾಯಕರು ಒಪ್ಪಿದ್ದಾರೆಂದು ಹೇಳಿ ನಾವು ಇದನ್ನು ವಿರೋಧ ಮಾಡಬಾರದೆಂದು ಹೇಳುತ್ತ ನಮ್ಮ ಸರ್ಕಾರಕ್ಕೆ ಬರಬೇಕಾದ ಹಣಕ್ಕೆ ಸಹಾಯಮಾಡಬೇಕೆಂದು ಹೇಳಿದ್ದಾರೆ.

ಶ್ರೀ ಎ. ಭೀಮಪ್ಪನಾಯಕ್.—ಪ್ರಿಸ್ಯೂಮ್ ಮಾಡಿಕೊಂಡು ಏಕೆ ಮಾತನಾಡುತ್ತೀರಿ ?

ಅಧ್ಯಕ್ಷರು.—ಒಬ್ಬ ಸದಸ್ಯರು ನಿಂತು ಮಾತನಾಡುವಾಗ ಮತ್ತೊಬ್ಬ ಸದಸ್ಯರೂ ಕೂಡ ನಿಂತು ಮಾತನಾಡಬಾರದು.

ಶ್ರೀ ಬಿ. ಕೆ. ಪುಟ್ಟರಾಮಯ್ಯ.— ಈ ಮನಿ ಬಿಲ್ಲುಗಳನ್ನು ಕುರಿತು ಇಷ್ಟು ಸುಲಭವಾಗಿ ನಮ್ಮ ಶ್ರೀಮಾನ್ ಮರಿಯಪ್ಪನವರು ಹೇಳುವುದನ್ನು ನೋಡಿದರೆ ನಮಗೇನೂ ಅರ್ಥವಾಗುತ್ತಿಲ್ಲ ಮತ್ತು ಅವರು ಈಗ ಏನನ್ನು ಹೇಳಿದರೋ ಅದನ್ನು ಕೂಡ ತಿಳಿದುಕೊಳ್ಳುವ ಶಕ್ತಿ ನಮಗಿಲ್ಲ. ನಮ್ಮನೆ ಒತ್ತಾಯಮಾಡಿ ನಮ್ಮ ಮನಸ್ಸಿನಲ್ಲಿರುವ ಒಂದು ಸರಿಯಾದ ಅಭಿಪ್ರಾಯವನ್ನು ತೆಗೆದುಕೊಳ್ಳಲು ಒಂದು ಅವಕಾಶ ಮಾಡಿಕೊಡಬೇಕು. ಮತ್ತು ಈ ಸಭೆಯ ಅಭಿಪ್ರಾಯವನ್ನು ತೆಗೆದುಕೊಂಡ ಮೇಲೆ ಮುಂದಿನ ಕ್ರಮವನ್ನು ತೆಗೆದುಕೊಳ್ಳಬಹುದು. ನಮ್ಮ ನಾಯಕರೇನೋ ಒಪ್ಪಿಬಿಟ್ಟರು ಎಂದು ನಾವು ಹೀಗೆ ಅವಸರವಾಗಿ ಈಗ ತೆಗೆದುಕೊಳ್ಳುವ ಅವಶ್ಯಕತೆಯಿಲ್ಲ. ಅಲ್ಲದೆ ಸರ್ಕ್ಯುಲರ್ ನಂಬರು 27ರ ಪ್ರಕಾರ ರೆಜಿಸ್ಟ್ಲೇಟೀವ್ ಬಿಸಿನೆಸ್ ಪ್ರಕಾರ ಇದನ್ನು ಸೇರಿಸಿಲ್ಲ.

ಅಧ್ಯಕ್ಷರು.— ಈ ಬಿಲ್ಲು ಸಭೆಗೆ ಇನ್ನೂ ಬಂದು ಇಂಟ್ರೊಡ್ಯೂಸ್ ಆಗಿರಲಿಲ್ಲ. ತಾವು ನಮ್ಮ ಅಶಕ್ತತೆಯ ವಿಷಯವನ್ನೇನೂ ಇಲ್ಲಿ ಹೇಳಬೇಕಾಗಿಲ್ಲ. ಕೂಡ ಬೇಕಾದ ಮೂರು ದಿನಗಳ ಕಾಲಾವಕಾಶ ಕೊಟ್ಟಿಲ್ಲ ಎಂದು ಹೇಳಿದರೆ ಸಾಕು. ಇದು ನಿಮ್ಮ ರೈಟ್ಸ್‌ಗೆ ಸಂಬಂಧಿಸಿದ್ದು.

ಶ್ರೀ ಟಿ. ಮರಿಯಪ್ಪ.—ಸ್ವಾಮಿ, ನಮ್ಮ ಮಾನ್ಯ ಸ್ನೇಹಿತರು ಹೇಳಿದ ಟೀಕೆಗಳನ್ನೆಲ್ಲ ಕೇಳಿದೆ. ಈ ವಿಚಾರದಲ್ಲಿ ಸಭಾ ನಾಯಕರು, ವಿರೋಧ ಪಕ್ಷದ ನಾಯಕರಾದ ಶ್ರೀಮಾನ್ ಕೆಂಚಪ್ಪನವರು ಮತ್ತು ಶ್ರೀಮಾನ್ ವೀರಪ್ಪನವರು, ಇವರುಗಳೊಡನೆ ಈ ಬಿಲ್ಲಿನ ವಿಷಯವಾಗಿ ಚರ್ಚೆ ಮಾಡಿದ್ದೆವು. ಇದರ ಮೇಲೆ ಇಷ್ಟೊಂದು ಟೀಕೆಗಳು ಮಾಡುತ್ತಿರುವುದನ್ನು ಕೇಳಿ ನನಗೆ ಆಶ್ಚರ್ಯವಾಗುತ್ತಿದೆ. ಈಗ ಈ ಫ್ಲೂ ಕಾಯಿಲೆ ನಿಮಿತ್ತ ನಮ್ಮ ಡಿಪಾರ್ಟ್‌ಮೆಂಟಿನ ನೌಕರರು ಇಲ್ಲದಿದ್ದರೂ ಶ್ರಮವಹಿಸಿ ಕೆಲವು ವಿವರಗಳನ್ನು ಈಗಾಗಲೇ ವಿರೋಧ ಪಕ್ಷದ ನಾಯಕರಿಗೆ ಒದಗಿಸಿದ್ದೇನೆ. ಮತ್ತು ಯಾವ ಯಾವ ಮನಿ ಬಿಲ್ಲುಗಳನ್ನು ತೆಗೆದುಕೊಳ್ಳಬೇಕಾಗಿದೆ ಎಂಬ ವಿವರಗಳನ್ನು ನನ್ನ ಬಡ್ಜೆಟ್ಟು ಭಾಷಣದಲ್ಲಿ ನಮೂದಿಸಿದೆ. ಅದರಲ್ಲಿರುವ ಏಳು ಬಿಲ್ಲುಗಳು ಮನಿ ಬಿಲ್ಲುಗಳು. ಇವುಗಳನ್ನು ಅಧಿವೇಶನ ಮುಂದುವರಿಯುವುದಕ್ಕೆ ಮೊದಲು ಪಾಸು ಮಾಡಬೇಕಾಗಿದೆ. ಆದರೆ ಮಾನ್ಯ ಸದಸ್ಯರು ಹೇಳಿದಂತೆ ಅವರಿಗೆ ಕಾಲಾವಕಾಶ ದೊರೆಯಬೇಕು. ಅದನ್ನು ನಾನು ಒಪ್ಪುತ್ತೇನೆ. ಕಾಲಾವಕಾಶ ಕೊಡುವುದಕ್ಕೆ ನನ್ನ ಅಭ್ಯಂತರವೇನಿಲ್ಲ. ಒಂದು ಸಲಹೆಯನ್ನು ಈಗ ನಾನು ಮಾಡಬೇಕಾಗಿದೆ. ಈಗ ಇಲ್ಲಿರುವ ನಮ್ಮ ಸದಸ್ಯರ ಪೈಕಿ ಈ ಬಿಲ್ಲಿನ ಮೇಲೆ ಅವರ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಒಂದು ಅವಕಾಶ ಕೊಡಬೇಕೆಂದು ಕೇಳುತ್ತೇನೆ. ಈ ಭಾಷಣದಿಂದ ನಮಗೂ ಮತ್ತು ತಮಗೂ ಅನುಕೂಲವಾಗುತ್ತದೆ. ಈ ವಿಷಯದಲ್ಲಿ ನಿಮ್ಮ ಸಹಕಾರ ನಮಗೆ ಬೇಕಾಗಿದೆ ಮತ್ತು ಈ ಬಿಲ್ಲುಗಳನ್ನು ಪಾಸು ಮಾಡಲು ಅನುಕೂಲಗಳನ್ನು ಕಲ್ಪಿಸುವರೆಂದು ನಂಬಿದ್ದೇನೆ. ಹಳೆಯ ಮೈಸೂರಿನಲ್ಲಿ ಒಂದು ತರದ ಕಾಯಿದೆ ಇದೆ. ಮದರಾಸು, ಬೊಂಬಾಯಿ ಮತ್ತು ಹೈದರಾಬಾದುಗಳಲ್ಲಿ ಬೇರೆ ಬೇರೆ ರೀತಿಯಾದ ಕಾನೂನುಗಳಿವೆ. ಇಲ್ಲಿರತಕ್ಕ ಬಿಲ್ಲುಗಳನ್ನೆಲ್ಲ ಈಗ ನಾವು ಕ್ರೋಡೀಕರಿಸಿ ಈ ಒಂದು ಬಿಲ್ಲನ್ನು ತಂದಿದ್ದೇವೆ. ರೇಟುಗಳಲ್ಲಿ ವ್ಯತ್ಯಾಸಗಳಿವೆ. ಕೆಲವು ಕಡೆ ಹೆಚ್ಚಾದ ರೇಟುಗಳಿವೆ ಮತ್ತೊಂದು ಕಡೆ ಆ ರೀತಿಯ ರೇಟುಗಳಿಲ್ಲ. ಹೀಗಿರುವುದರಿಂದ ಅನಾವಶ್ಯಕವಾದ ತೊಂದರೆಗಳಾಗಿವೆ. ಇವನ್ನೆಲ್ಲ ಸರಿಪಡಿಸುವುದಕ್ಕೋಸ್ಕರ ಬಿಲ್ಲನ್ನು ತರಬೇಕಾಗಿದೆ. ವಿರೋಧ ಪಕ್ಷದವರು ಹೇಳಿದಂತಹ ರಿಪರ್‌ಕಷನ್ನುಗಳೇನೂ ಇಲ್ಲ. ವಿರೋಧ ಪಕ್ಷದವರು ನಾಳೆಯ ದಿವಸ ಮಾತನಾಡಬಹುದು

(ಶ್ರೀ ಟಿ. ಮರಿಯಪ್ಪ.)

ಮತ್ತು ಅಮೆಂಡುಮೆಂಟುಗಳನ್ನು ನಾಳೆ 12 ಗಂಟೆಯ ವೇಳೆಗೆ ಕೊಡಬಹುದು. ಇದಕ್ಕೆ ನನ್ನ ಅಭ್ಯಂತರವೇ ನಿಲ್ಲ. ಅಧ್ಯಕ್ಷರನ್ನು ಹೀಗೆ ಮಾಡಲು ನಾನು ಕೇಳಿ ಕೊಳ್ಳುತ್ತೇನೆ. ಆದುದರಿಂದ ತಮ್ಮನ್ನು ಪ್ರಾರ್ಥಿಸು ವುದು ಇಷ್ಟೇ. ನಿಮ್ಮ ಪಾರ್ಟಿಯವರು ಹೇಳಿದಂತೆ ಸಮಯವನ್ನು ತೆಗೆದುಕೊಳ್ಳಬಹುದು. ಅದಕ್ಕೆ ನನ್ನ ಅಬ್ಜೆಕ್ಷನ್ ಏನಿಲ್ಲ. ಇದನ್ನೆಲ್ಲ ಆಲೋಚನೆಮಾಡಿ ಈಗ ಮಾತನಾಡಬೇಕೆಂದಿರುವ ಸದಸ್ಯರಿಗೆ ಒಂದು ಅವ ಕಾಶವನ್ನು ಕೊಡಬೇಕೆಂದು ಕೋರುತ್ತೇನೆ. ಹಾಗಿ ಲ್ಲದೆ ಹೋದ ಪಕ್ಷದಲ್ಲಿ ಈಗ ನಮ್ಮ ಮುಂದಿರುವ ಮೈಸೂರು ಮೋಟಾರು ವೆಹಿಕಲ್ಸ್ ಟ್ಯಾಕ್ಸೇಷನ್ನಿನ ಬಿಲ್ಲನ್ನಾದರೂ ತೆಗೆದುಕೊಂಡರೆ ಅನುಕೂಲವಾಗು ತ್ತದೆ. ಇದರಲ್ಲಿ ಹೆಚ್ಚಿಗೆ ಏನೂ ಇಲ್ಲ. ಈ ಡೀಸಲ್ ಆಯಿಲನ ರೇಟು 0-1-6 ಇದ್ದುದ್ದನ್ನು 0-3-0 ಏರಿಸು ವುದಕ್ಕಾಗಿ ತಂದಿದೆ. ಹಳೆಯ ಮೈಸೂರಿನಲ್ಲಿ ಇದರ ರೇಟ್ ಒಂದೂವರೆ ಆಣೆ ಇತ್ತು. ಬಾಕಿ ಕಡೆ ಮೂರು ಆಣೆ—ಮೂರುವರೆ ಆಣೆ ಇತ್ತು. ಈಗ ಒಂದೂವರೆ ಆಣೆಯಿಂದ ಮೂರು ಆಣೆಗೆ ಮಾಡಿದೆ. ಅದು ಸಿಂಪಲ್ ಮೆಜರ್. ಈ ಬಗ್ಗೆ ವಿರೋಧ ಪಕ್ಷದವರು ನಾಳೆ ಮಾತನಾಡುತ್ತೇವೆ ಎಂದರೆ ಅವರಿಗೆ ಚರ್ಚೆ ಮಾಡುವು ದಕ್ಕೆ ಅವಕಾಶಕೊಡಿ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ನಮ್ಮ ನಾಯ ಕರು ಏನು ಹೇಳಿದರೋ, ಅವರು ಯಾವ ರೀತಿ ಅರ್ಥ ಮಾಡಿಕೊಂಡರೋ, ಒಂದೂ ನನಗೆ ಅರ್ಥವಾಗುವು ದಿಲ್ಲ. ಅವರು ಹೇಳುವುದನ್ನು ನೋಡಿದರೆ, ನಮ್ಮ ನಾಯಕರು ಈ ಮನೂದೆಯನ್ನು ಇವೊತ್ತು ತರಲು ಒಪ್ಪಿಕೊಂಡಿದ್ದಾರೆಂಬ ಅರ್ಥ ಬರುತ್ತದೆ. ಅವರು ಆ ರೀತಿ ಹೇಳುವುದನ್ನು ನಾವು ಒಪ್ಪಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ನಮಗೆ ತಿದ್ದುಪಡಿಗಳನ್ನು ಕಳಿಸಿ ಕೊಡಲು ಅವಕಾಶಕೊಡಿ. ನಾವೆಲ್ಲರೂ ನಾಳೆ ಮಾತನಾಡೋಣ ಎಂಬ ತೀರ್ಮಾನಕ್ಕೆ ವಿಧಿಯಿಲ್ಲದೆ ಈಗ ಬರಬೇಕಾಗಿದೆ. ನಾವು ಎಷ್ಟು ರೀಜನಬಲ್ ಎನ್ನುವುದನ್ನು ಚೈಜರಿ ಬೆಂಚಿನವರು ಅರಿತು ಕೊಳ್ಳಬೇಕು.

ಅಧ್ಯಕ್ಷರು.—ನಾವು ಹಾಗೆಯೇ ಮಾಡೋಣ. ಇವೊತ್ತು ಯಾರುಯಾರು ಮಾತುನಾಡತ್ತಾರೋ ಮಾತನಾಡಲಿ. ನಾಳೆಯ ದಿವನವೇ ಅಮೆಂಡುಮೆಂಟು ಗಳನ್ನು ಕಳಿಸಲಿ. ಈಗ ಮನೂದೆಯ ಕಡಿಸಿಡ ರೇಷನ್ ಸ್ಟೇಜಿನಲ್ಲಿ ಯಾರು ಯಾರು ಮಾತನಾಡು ತ್ತಾರೋ ಮಾತನಾಡಲಿ. ಈ ಮನೂದೆಯನ್ನು ಕ್ಲಾಜ್ ಬೈ ಕ್ಲಾಜು ಚರ್ಚೆಗೆ ತೆಗೆದುಕೊಳ್ಳುವಾಗ ತಿದ್ದುಪಡಿಗ ಳನ್ನು ವಿಚಾರ ಮಾಡೋಣ. ಹೀಗೆ ಮಾಡಿದರೆ ಸರಿ ಹೋಗುತ್ತದೆ. ಈಗ ಉಳಿದ ಮನೂದೆಗಳೆಲ್ಲವೂ ಚರ್ಚೆಯಾದಮೇಲೆ ಈ ಮನೂದೆಯನ್ನು ತೆಗೆದು ಕೊಳ್ಳೋಣ.

Sri GAJANAN PANDIT (Mangalore II).—Sir, tomorrow being Saturday, we will be sitting from 8-30 A.M. to 12-30 P.M. So, any amendment sent after 12-30 would not be all right.

Mr. SPEAKER.—If we sit from 12 NOON to 5 P.M., it would be better. Tomorrow we will sit from 12 to 5. In the first part of the day, we will take up the consideration of this Bill and in the second part of the day, we will take up the amendments. From Monday, we will consider the other Bills.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಗುಬ್ಬಿ).—ನನ್ನದು ಒಂದು ರಿಕ್ವೆಸ್ಟ್. ಹಣಕಾಸಿನ ಮಂತ್ರಿಗಳು ಹೊಸ ದಾಗಿ ಮೈಸೂರಿಗೆ ಸೇರಿರುವ ನಾಲ್ಕು ಭಾಗಗಳಿಗೆ ಸಂಬಂಧಪಟ್ಟಂತಹ ಸೇಲ್ಸ್‌ಟ್ಯಾಕ್ಸ್ ಹಳೆಯ ಆಕ್ಟ್ ಗಳನ್ನು ನಮ್ಮ ಉಪಯೋಗಕ್ಕೆ ಕೊಡೋಣವೆಂದು ಹೇಳಿದ್ದರು. ಆ ಆಕ್ಟ್‌

Sri A. BHEEMAPPA NAIK.—In that case, there is no need to adjourn. We must adjourn immediately, or not adjourn at all.

Sri T. MARIAPPA.—The whole thing can be decided tomorrow, Sir, in consultation with the Leader of the House.

Mr. SPEAKER.—I too stand for adjournment. The 'flu' is also in my house and I am much afraid. Suppose, I fall ill; what happens to the House? There is no Deputy. Anyway, we will see what happens after consulting the Leader.

ಶ್ರೀ ಬಿ. ರಾಚಯ್ಯ (ಚಾಮರಾಜನಗರ).—ಭಾನುವಾರದ ದಿನ ಸೆಷ್ಷ ಇಟ್ಟರೆ ನಾವು ಅಟೆಂಡ್ ಮಾಡುವುದಕ್ಕಾಗುವುದಿಲ್ಲ. ನಮಗೆ ಬೇರೆ ಬೇರೆ ಸಬ್‌ಕಮಿಟಿ ಮೀಟಿಂಗ್‌ಗಳಿವೆ.

ಅಧ್ಯಕ್ಷರು.—ತಾವು ಹೋಗಬಹುದು.

ಶ್ರೀ ಬಿ. ರಾಚಯ್ಯ.—ಇತರ ಸದಸ್ಯರಿಗೂ ಅದೇ ತರಹ ತೊಂದರೆ ಇದೆ. ಅವರೂ ಸಹ ಮೀಟಿಂಗ್‌ಗಳಿಗೆ ಹೋಗಬೇಕಾಗಿದೆ.

ಅಧ್ಯಕ್ಷರು.—ನಾಳೆ ಶನಿವಾರ ಒಂದು ದಿನದಲ್ಲಿ ಹೇಗೆ ಪೂರೈಸಲಾಗುತ್ತದೆ?

*Sri K. PUTTASWAMY (Mysore).—If it is not possible to finish this Bill by tommorrow evening, then, is it not better to avoid the idea of meeting on Sunday and taking up this on Monday, Sir? At this stage I would like to suggest that the idea of recess is there due to the inconvenience experienced by the Government. On the side of members, I do not know how many of us feel that there should be a recess at all. In fact, I had fever for three to four days and I went on with the work. There was absolutely no difficulty. Anyway, I feel that if the House is to sit after Saturday, let it meet on Monday and not on Sunday.

Mr. SPEAKER.—All right. But, we will decide it in consultation with the Leader of the House. I agree with Sri Puttaswamy.

Sri G. DUGGAPPA (Chitaldrug—Scheduled Castes).—Sir, several Hon'ble Members are anxious to go to their places because many of their family people are laid up with fever. As a matter of fact, my son is laid up with 104^0 temperature; so, we are all anxious to go back to our places.

Mr. SPEAKER.—My son is laid up with high fever.

1 P.M.

ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್ (ಮೈಸೂರು).—ಸ್ವಾಮಿ, ಮಾನ್ಯ ಅರ್ಥ ಸಚಿವರ್ ಈ ಸಭೆಯಲ್ಲಿ ಮಂಡಿಸಿರತಕ್ಕಂಥ ಮಾರಾಟ ತೆರಿಗೆಯ ಮಸೂದೆಯನ್ನು ನನ್ನಮಟ್ಟಿಗೆ ಸರಿಯಾಗಿ ಕೂಲಂಕಷವಾಗಿ ಪರಿಶೀಲನೆ ಮಾಡಿದ್ದೇನೆ. ಅರ್ಥಸಚಿವರಿಗಿದ್ದಂಥ ತೊಂದರೆಗಳು ಮತ್ತು ಅನನುಕೂಲಗಳ ಮನ್ಯದಲ್ಲಿ ಇಷ್ಟುಬೇಗನೆ ಈ ಸಭೆಯ ಮುಂದೆ ಮೈಸೂರು ಸಂಸ್ಥಾನದ ಎಲ್ಲಾ ಕ್ಷೇತ್ರಗಳಿಗೂ ಅನ್ವಯಿಸುವ ಒಂದು ಮಸೂದೆಯನ್ನು ಇಟ್ಟಿದ್ದಕ್ಕಾಗಿ ಅವರನ್ನು ವಂದಿಸುತ್ತೇನೆ. ಕಾರಣವಾದರೂ ಇಷ್ಟೇ. ಮೈಸೂರು ರಾಜ್ಯಕ್ಕೆ ನಾಲ್ಕುಭಾಗದ ಪ್ರಾಂತಗಳು ಸೇರಿ ಹೊಸ ರಾಜ್ಯವಾಗುವ ಒಂದು ಸಂದರ್ಭದಲ್ಲಿ ಅನೇಕ ಜನರಿಗೆ ಅನೇಕ ರೀತಿಯಲ್ಲಿ ತೊಂದರೆಯಾಗಿದೆ, ವ್ಯಾಪಾರಸ್ಥರಿಗೆ ಬಹಳ ಮಟ್ಟಿಗೆ ತೊಂದರೆಯಾಗುತ್ತಿದೆ. ಇಂಥ ಪರಿಸ್ಥಿತಿಯಿದೆ ಎಂಬುದನ್ನು ಅರಿತು ಮಾನ್ಯ ಅರ್ಥ ಸಚಿವರು ಆದಷ್ಟು ಬೇಗ ಈ ಒಂದು ಮಸೂದೆಯನ್ನು ತಂದಿದ್ದಾರೆ. ಈ ಮಸೂದೆಯಲ್ಲಿ ಯಾವ ಹೆಚ್ಚಿನ ತತ್ತ್ವದ ಬದಲಾವಣೆಗಳೂ ಇಲ್ಲವೆಂದು ಅವರು ಹೇಳಿದ್ದಾರೆ. ಮತ್ತು ಈ ಮಸೂದೆಯಲ್ಲಿ ಕೆಲವು ತೆರಿಗೆಗಳೇನಿವೆ ಅವನ್ನುಮಾತ್ರ ಸ್ವಲ್ಪ ಬದಲಾಯಿಸುತ್ತೇವೆ ಎಂದು ಹೇಳಿದ್ದಾರೆ. ಈ ಕಾನೂನಿನಲ್ಲಿ ಕೆಲವು ಪದಾರ್ಥಗಳಿಗೆ ವಿನಾಯಿತಿ ತೋರಿಸಿದ್ದಾರೆ. ಆದರೂ ಕೂಡ ಈ ಮಸೂದೆಯಿಂದ ಕೆಲವು ದರ್ಜೆ ವ್ಯಾಪಾರಸ್ಥರಿಗೆ ಒಂದು ಸಲವಲ್ಲ ಎರಡು ಸಲ ತೆರಿಗೆಗಳು ಕೊಡುವ ಪರಿಸ್ಥಿತಿ ಬಂದಿದೆ. ಇದು ಹೇಗೆ ಎಂದರೆ ಟರ್ನ್‌ಓವರ್ ಮೇಲೆ ಒಂದು ತೆರಿಗೆಯನ್ನು ಹಾಕಬೇಕೆಂದು ಒಂದು ಸ್ಲ್ಯಾಬ್ ಸಜೆಸ್ಟ್ ಮಾಡಿದ್ದಾರೆ. ಅದರ ಜೊತೆಗೆ ಆ ಮಸೂದೆಯ ಮೂಲಕ ಕೆಲವು ಪದಾರ್ಥಗಳ ಮೇಲೆ ತೆರಿಗೆಯನ್ನು ವಿಧಿಸಿದ್ದಾರೆ. ಯಾವ ಮನುಷ್ಯನ ಮೇಲೆ ಯಾವ ವ್ಯಾಪಾರಸ್ಥನಮೇಲೆ ಈ ತೆರಿಗೆಗಳನ್ನು ಹೇರಿದ್ದಾರೋ ಆ ಮನುಷ್ಯ ಈಗಿರುವುದರ ಜೊತೆಗೆ ಯಾವ ಪದಾರ್ಥಗಳಮೇಲೆ ತೆರಿಗೆಯನ್ನು ವಿಧಿಸಿಲ್ಲವೋ ಅವುಗಳಿಗೂ ಸಹ ತನ್ನ ವ್ಯಾಪಾರದಮೇಲೆ ತೆರಿಗೆ ಕೊಡುವ ಪರಿಸ್ಥಿತಿ ಈ ದಿವಸ ಇದೆ. ಎಂದರೆ ಈ ದಿವಸ ಸಾಮಾನ್ಯವಾಗಿ ಮನುಷ್ಯರು ಏನೇನು ಸಾಮಾನುಗಳನ್ನು ಪದಾರ್ಥಗಳನ್ನು ಉಪಯೋಗಿಸಬಹುದೋ ಅವೆಲ್ಲದರ ಮೇಲೆ ಈ ತೆರಿಗೆಯಿದೆ. ಎಂದಮೇಲೆ ಕೆಲವಕ್ಕೆ ತೆರಿಗೆಯಿದೆ; ಕೆಲವಕ್ಕೆ ವಿನಾಯಿತಿಯಿದೆ ಎಂದು ಹೇಳುವುದರಲ್ಲಿ ಅರ್ಥವಿಲ್ಲ.

ಮತ್ತೆ ಈ ಮಸೂದೆಯಲ್ಲಿ Incidence and levy of tax ಎಂದು ಒಂದು ಸ್ಲ್ಯಾಬನ್ನು ಕೂಡ ಮಾಡಿದ್ದಾರೆ. ಅದರಂತೆ 15 ಸಾವಿರ ರೂಪಾಯಿಗಳಿಗೆ ಶೇಕಡ ಅರ್ಧ, 15 ಸಾವಿರದಿಂದ 30 ಸಾವಿರ ರೂಪಾಯಿಗಳವರೆಗೆ ಶೇಕಡ ಒಂದು, ಮುಂದೆ ಬೇರೆ ಈ ರೀತಿ ಮಾಡಿದ್ದಾರೆ. ಇದು ಬಹಳ ಉಪಯೋಗವಾಗುವ ಒಂದು ತೆರಿಗೆಯ ಪದ್ಧತಿ. ಮಾರಾಟ ತೆರಿಗೆಯ ವಿಚಾರದಲ್ಲಿ ದೇಶದಲ್ಲಿ ಸಾಮಾನ್ಯವಾಗಿ ಒಳ್ಳೆಯ ಅಭಿಪ್ರಾಯವಿರಲಿಲ್ಲ. ಕಾರಣ ಯಾವ ಮನುಷ್ಯ ಎಷ್ಟೇ ಸತ್ಯದಿಂದ ನಡೆಯುವುದಕ್ಕೆ ಪ್ರಯತ್ನ ಪಟ್ಟರೂ ಲೆಕ್ಕ ಸರಿಯಾಗಿಟ್ಟರೂ ಅವನಿಗೆ ತೊಂದರೆ ತಪ್ಪುತ್ತಿರಲಿಲ್ಲ. ಲೆಕ್ಕ ಕೊಡದಿದ್ದರೆ ಕೊಡಲಿಲ್ಲ ವೆಂದೂ, ಕೊಟ್ಟರೆ ಸರಿಯಾಗಿಲ್ಲವೆಂದೂ, ಲೈಸೆನ್ಸ್ ತೆಗೆದುಕೊ ಎಂದು ಜುಲುಂಮಾಡಿ ತೆರಿಗೆ ಕೊಡು ಎಂದು ಹಿಂಸೆ ಮಾಡುವುದೂ ಹೀಗೆ ಅನುಭವಿಸ

(ಶ್ರೀ ಕೆ. ಎಸ್. ನೂರ್ಯನಾರಾಯಣರಾವ್).

ಬೇಕಾದ ನಾನಾ ರೀತಿಯ ತೊಂದರೆಯಿತ್ತು. ಈ ಮಸೂದೆಯಿಂದ ಈ ಕೆಲವು ತೊಂದರೆಗಳು ನಿವಾರಣೆ ಯಾಗುವುದಕ್ಕೆ ಅವಕಾಶವಾಗಿದೆ. ಈ ಮಸೂದೆಯ ಪ್ರಕಾರ ಸಣ್ಣ ವ್ಯಾಪಾರಸ್ಥ ಅಷ್ಟಾಗಿ ಲೆಕ್ಕದ ವಿಚಾರ ದಲ್ಲಿ ಹೆಚ್ಚು ಗಮನ ಕೊಡಬೇಕಾಗಿಲ್ಲ. ಏಕೆಂದರೆ ಸಾಮಾನ್ಯವಾಗಿ 20 ಸಾವಿರ ರೂಪಾಯಿಗಳ ಕೆಳಗೆ ವಹಿವಾಟಿರುವ ವ್ಯಾಪಾರಸ್ಥರು ತಮ್ಮ ಲೆಕ್ಕ ವಿಡುವಾಗ ಕೊಂಡ ರಸೀದಿಯನ್ನಿಟ್ಟಿದ್ದರೆ ಲೆಕ್ಕ ಒಪ್ಪಿ ಕೊಳ್ಳುವ ಪರಿಸ್ಥಿತಿಯಿದೆ. ಆದ್ದರಿಂದ ಅನೇಕರು ತೆರಿಗೆಯನ್ನು ತಪ್ಪಿಸಿಕೊಳ್ಳುವುದಕ್ಕೆ ಅವಕಾಶವಿಲ್ಲ ದಂತಾಗುತ್ತದೆ ಎಂಬ ಭಾವನೆಯಿದೆ. ಸಣ್ಣ ವ್ಯಾಪಾರಸ್ಥ ಲೆಕ್ಕವಿಡುವುದು ಕಷ್ಟ. ನಾವು ತಿಳಿದ ಹಾಗೆ ಸಾಮಾನ್ಯವಾಗಿ ಬಿಲ್ಲುಗಳನ್ನಿಟ್ಟೇ ಲೆಕ್ಕ ಬರೆ ಯುತ್ತಾರೆ. ಅದನ್ನು ಒಪ್ಪಿಕೊಳ್ಳುತ್ತಾರೆ. ಆದ್ದ ರಿಂದ ಸಣ್ಣ ವ್ಯಾಪಾರಸ್ಥ ಬಿಲ್ ಇಡಲೇಬೇಕೆಂಬ ಕಡ್ಡಾಯ ಬರುತ್ತದೆ. ಸಣ್ಣ ವ್ಯಾಪಾರಸ್ಥ ಬಿಲ್ ಇಡ ಬೇಕಾದರೆ ದೊಡ್ಡ ವ್ಯಾಪಾರಸ್ಥರಲ್ಲಿ ಯಾರಿಂದ ಕೊಳ್ಳುತ್ತಾನೋ ಆತನಿಂದ ಬಿಲ್ಲು ಡಿಮ್ಯಾಂಡ್ ಮಾಡ ಬೇಕಾಗಿ ಬರುತ್ತದೆ. ಎಂದಮೇಲೆ ಬಿಲ್ ಹಾಕದೆ ವ್ಯಾಪಾರಮಾಡುವ ಅವಕಾಶ ಈ ಮಸೂದೆಯಿಂದ ತಪ್ಪಿ ಆ ಮೂಲಕ ತೆರಿಗೆ ತಪ್ಪಿಸಿಕೊಳ್ಳುವುದು ತಪ್ಪು ತ್ತದೆ. ಇದು ಸ್ವಾಗತಾರ್ಹವಾದ ವಿಚಾರ.

ಈ ಮಸೂದೆಯಲ್ಲಿ ಯಾವ ದರ್ಜೆ ವ್ಯಾಪಾರಸ್ಥ ತೆರಿಗೆಯನ್ನು ಕೊಡಬೇಕೆಂದು ಹೇಳುವಾಗ ಡೆಫೆನಿಷ್ಷ ನ್ನಲ್ಲಿ ಕೃಷಿ ಮಾಡುವ ಮನುಷ್ಯ ತಾನು ಮಾರುವ ಒಂದು ಪದಾರ್ಥಕ್ಕೆ ತೆರಿಗೆ ಕೊಡಬೇಕಾಗಿಲ್ಲ ಎಂದು ಹೇಳಿರುವುದು ಬಹಳ ಸೂಕ್ತವಾಗಿದೆ. ಏಕೆಂದರೆ ಕೊಂಡವನಾಗಲ ಮಾರುವವನಾಗಲ ತೆರಿಗೆ ಕೊಡಬೇ ಕೆಂದು ಹೇಳುವ ಈ ಮಸೂದೆಯಲ್ಲಿ ಈ ರೀತಿ ವಿನಾ ಯಿತಿ ತೋರಿಸದಿದ್ದರೆ ಬಹುಶಃ ಬೆಳೆದ ಪ್ರತಿಯೊಬ್ಬನೂ ಕೂಡ ತೆರಿಗೆಯನ್ನು ಹೊರಬೇಕಾಗುತ್ತಿತ್ತು. ಈ ದೃಷ್ಟಿಯಿಂದಲೂ ಕೂಡ ಈ ಮಸೂದೆಯಲ್ಲಿ ಬಹಳ ಮುಚ್ಚಿಗೆ ಸುಧಾರಣೆಯಾಗಿದೆ.

ಸ್ವಾಮಿ, ಇನ್ನೊಂದು ವಿಚಾರ ಹೇಳಬೇಕಾಗಿದೆ. ಇದುವರೆಗೆ ಮೈಸೂರು ರಾಜ್ಯದಲ್ಲಿ ಏಳೂವರೆ ಸಾವಿರ ರೂಪಾಯಿಗಳ ಪರಿಮಿತಿಯಿತ್ತು. ಅದಕ್ಕಿಂತ ಕೆಳಗಿರು ವವರಿಗೆ ಈ ತೆರಿಗೆಯಿರಲಿಲ್ಲ. ಹೊಸ ಮಸೂದೆಯ ಪ್ರಕಾರ ಆ ಪರಿಮಿತಿಯನ್ನು ಐದು ಸಾವಿರ ರೂಪಾಯಿ ಗಳಿಗೆ ಇಳಿಸಿರುವುದರಿಂದ ಬಹು ಜನರಿಗೆ ತೆರಿಗೆ ಬೀಳು ತ್ತದೆ. ಏಳೂವರೆಸಾವಿರ ರೂಪಾಯಿಗಳೆಂದಿರುವುದನ್ನು ಐದು ಸಾವಿರ ರೂಪಾಯಿಗಳಿಗೆ ಇಳಿಸಿದರೆ ಸಣ್ಣಬೀಡಿ ಅಂಗಡಿಯವರೂ ಸಹ ತೆರಿಗೆ ಕೊಡಬೇಕಾಗುತ್ತದೆ. ಅವರ ಬಂಡವಾಳದಲ್ಲಿ ಸಂಸಾರ ನೀಗಿ ತೆರಿಗೆ ಕೊಡ ಬೇಕೆಂದರೆ ಬಹಳ ಕಷ್ಟವಾಗುತ್ತದೆ. ಆದ್ದರಿಂದ ಈ ಮುಚ್ಚಿಗೆ ಸ್ವಲ್ಪ ಪರಿಹಾರ ನೀಡಬೇಕೆಂದು ಅರ್ಥ ಸಚಿವರಲ್ಲಿ ಪ್ರಾರ್ಥನೆಮಾಡುತ್ತೇನೆ.

ಇನ್ನೊಂದು ವಿಷಯ ಹೇಳಬೇಕೆಂದಿದ್ದೇನೆ. ಬಹುಶಃ ಅರ್ಥಸಚಿವರು ಅದನ್ನು ಒಪ್ಪುತ್ತಾರೋ ಇಲ್ಲವೋ ಗೊತ್ತಿಲ್ಲ. ಆದರೂ ಗಮನಕ್ಕೆ ತರಬೇಕಾಗಿದೆ. ಈ ತೆರಿಗೆ ನಾನು ಮೊದಲೇ ಹೇಳಿದ ಹಾಗೆ ಎಲ್ಲ ದರ್ಜೆ ಆಹಾರ ಪದಾರ್ಥಗಳು ಮತ್ತು ಸಾಮಾನುಗಳ ಮೇಲೆ ಬೀಳುವುದರಿಂದ ಯಾವುದರ ಮೇಲೆ ತೆರಿಗೆ ಹಾಕಿದ್ದಾರೆ ಯಾವುದರ ಮೇಲೆ ಹಾಕಿಲ್ಲ ಎಂದು ಹೇಳುವುದು ಕಷ್ಟ. ಆ ದೃಷ್ಟಿಯಿಂದ ಈ ವಿಚಾರದಲ್ಲಿ ಸ್ವಲ್ಪ ಪರಿಶೀಲನೆ ಅವಶ್ಯಕ.

ಶ್ರೀ ಟಿ. ಮರಿಯಪ್ಪ.—ಆಹಾರ ಪದಾರ್ಥಗಳ ಮೇಲೆ ವಿನಾಯಿತಿಯಿರುತ್ತದೆಂದು ಆಗಲೇ ಹೇಳಿದ್ದೇನೆ. ಮೂರನೆಯ ಷೆಡ್ಯೂಲಿನಲ್ಲಿ ಕೆಲವು ಪದಾರ್ಥಗಳಿಗೆ ವಿನಾಯಿತಿ ಸೂಚಿಸಿರುವುದನ್ನು ನೋಡಬಹುದು.

ಶ್ರೀ ಕೆ. ಎಸ್. ನೂರ್ಯನಾರಾಯಣರಾವ್.—ಈ ಸಂದರ್ಭದಲ್ಲಿ ಆಹಾರ ಪದಾರ್ಥಗಳ ಮೇಲೆ ತೆರಿಗೆ ಹಾಕುವುದಿಲ್ಲವೆಂದು ಹೇಳುವುದು ಸೂಕ್ತವಾಗಿದೆ ಮತ್ತು ಆ ರೀತಿ ಭರವಸೆ ಕೊಟ್ಟಿರುವುದು ಈ ಮಸೂ ದೆಯ ಮೇಲೆ ವಿರೋಧಾಭಿಪ್ರಾಯವೇನನ್ನು ವ್ಯಕ್ತ ಪಡಿಸಬಹುದಾಗಿತ್ತೋ ಅದನ್ನು ಆದಷ್ಟು ಮಟ್ಟಿಗೆ ಕಡಮೆಮಾಡಿದೆಯೆಂದು ಭಾವಿಸುತ್ತೇನೆ.

ಸಾಮಾನ್ಯವಾಗಿ ಯಾವ ಮನುಷ್ಯನೂ ಕೂಡ ಹೆಚ್ಚಿಗೆ ತೆರಿಗೆಯನ್ನು ಕೊಡುವುದಕ್ಕೆ ಒಪ್ಪುವುದಿಲ್ಲ. ಆದರೆ ನರ್ಕಾರದಲ್ಲಿ ಹೆಚ್ಚು ಹಣಕಾಸಿನ ಕೊರತೆ ಇರುವುದ ರಿಂದ ಕೆಲವು ತೆರಿಗೆಯನ್ನು ವಿಧಿಸಬೇಕಾಗಿದೆ. ಆದರೆ ಯಾವ ಮಟ್ಟದಲ್ಲಿ ವಿಧಿಸಬೇಕು ಎಷ್ಟು ವಿಧಿಸಬೇಕು ಎಂಬುದರಲ್ಲಿ ಒಂದು ಜಿಜ್ಞಾಸೆ ಬರುತ್ತದೆ. ಸಣ್ಣ ಪಟ್ಟ ವ್ಯಾಪಾರಸ್ಥರಿಗೆ ಹೆಚ್ಚಿಗೆ ರಿಯಾಯಿತಿಕೊಡಿ. ಈಗ ಐದು ಸಾವಿರ ರೂಪಾಯಿಗಳೆಂದು ಏನು ಒಂದು ಪರಿಮಿತಿಯನ್ನು ನಿಗದಿ ಮಾಡಿದ್ದಾರೋ ಅದನ್ನು ಏಳೂ ವರೆ ಸಾವಿರ ರೂಪಾಯಿಗಳಿಗೆ ಹೆಚ್ಚಿಸಿದ್ದಾರೆ. ಎಲ್ಲಾ ಜನಗಳಿಗೂ ಏಕಕಾಲದಲ್ಲಿ ಒಂದೇ ತರಹ ಕಾನೂನು ಅನ್ವಯವಾಗುವಂತೆ ಮಾಡುವುದು ಬಹಳ ಒಳ್ಳೆಯದು. ಇನ್ನುಮುಂದೆ ನಮ್ಮ ದೇಶಕ್ಕೆ ಅನ್ವಯಿಸುವಂತೆ ಏಕೀ ಕೃತವಾದ ಒಂದು ಕಾನೂನು ಕಾಯಿದೆ ಮಾಡುವುದ ರಿಂದ ಪ್ರಯೋಜನವಾಗುತ್ತದೆ. ಅದು ಒಳ್ಳೆಯದು. ಇತ್ತೀಚೆಗೆ ಷೆಡ್ಯೂಲಿನಲ್ಲಿ ಅವರು ಸೇರಿಸಿರತಕ್ಕ ಪದಾ ರ್ಥಗಳ ಮೇಲೆ ತೆರಿಗೆ ಹೆಚ್ಚಾಗಿದೆ. ಅವುಗಳನ್ನು ಅವರು ಪುನರ್ವಿಮರ್ಶೆ ಮಾಡಬೇಕು. ಅಕ್ಕಿ, ಕಾಫೀ ಸೀಡ್ಸ್, ಬೆಂಕಿಪೆಟ್ಟಿಗೆ ಇವುಗಳ ಮೇಲೆ ತೆರಿಗೆ ದರ ಹೆಚ್ಚೆಂದು ಕಾಣುತ್ತದೆ. ಅದರ ಪರಿಮಿತಿಯನ್ನು ಕಡಮೆಮಾಡ ಬೇಕು. ಸಕ್ಕರೆ ಮೇಲೆ ತೆರಿಗೆ ಶೇಕಡ 6ರಂತೆ ಇದೆ. ಕೇಂದ್ರ ನರ್ಕಾರದವರು ಅದರ ಮೇಲೆ ಟ್ಯಾಕ್ಸ್‌ಹಾಕಿ ದ್ದಾರೆ. ಸಕ್ಕರೆ, ತೆರಿಗೆಯ ಮೇಲೆ ವಿನಾಯಿತಿ ತೋರಿಸ ಬೇಕು. ಸಾಮಾನ್ಯ ಬಳಕೆಯ ಪದಾರ್ಥಗಳ ಮೇಲೆ ವಿನಾಯಿತಿ ತೋರಿಸಬೇಕಾಗುತ್ತದೆ. ಮಾನ್ಯ ಅರ್ಥ ಸಚಿವರು ಈ ವಿಷಯದಲ್ಲಿ ಗಮನಕೊಡಬೇಕೆಂದು ಹೇಳಿ ಈ ವಸೂದೆಯನ್ನು ಸ್ವಾಗತಿಸುತ್ತೇನೆ.

Sri V. P. DEENADAYALU NAIDU (Cubbonpet).—May I just ask for some information? Two days ago I heard that there was an Inter State Sales-tax meeting. I do not know what conclusion were arrived at that meeting . . .

Sri T. MARIAPPA.—There was no Inter-State meeting two days or three days ago.

Sri V. P. DEENADAYALU NAIDU.—The second thing is, there was a news that the Government of India would take over two or three itemes, *viz.*, sugar and tobacco and instead of *sales* tax being levied on them, a sort of excise duty was to be levied by the Centre, and that the Mysore State would be compensated. What has happened to that proposal?

Sri T. MARIAPPA.—As the Hon'ble Member is aware the Government of India have endeavoured to levy excise on certain articles subjected to sales tax. But we must show to them the probable realisations in the State on account of levying Sales Tax. If we omit to do that we will not get anything. Therefore it must be included here and we must be able to satisfy them that so much was the amount that was realisable here. There would not be double point tax.

ಶ್ರೀ ಕೆ. ಪಿ. ಗದಗ್ (ಗದಗ್).—ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಅರ್ಥಸಚಿವರು ಮಂಡಿಸಿರುವ ಈ ಸೇಲ್ಸ್ ಟ್ಯಾಕ್ಸ್ ಬಿಲ್ಲಿಗೆ ನನ್ನ ಅನುಮೋದನೆಯನ್ನು ಕೊಡುವ ಈ ಸಂದರ್ಭದಲ್ಲಿ ನನ್ನ ಕೆಲವು ಅಭಿಪ್ರಾಯಗಳನ್ನು ಸಭೆಯ ಮುಂದಿಡಬಯಸುತ್ತೇನೆ.

ಈ ಸೇಲ್ಸ್‌ಟ್ಯಾಕ್ಸ್‌ನ್ನು ನಮ್ಮ ದೇಶದಲ್ಲಿ ಬಹುಶಃ 1947 ರಿಂದ ಅನೇಕ ಪ್ರಾಂತಗಳಲ್ಲಿ ತಂದಿದ್ದಾರೆ. ಸೇಲ್ಸ್ ಟ್ಯಾಕ್ಸ್ ನಮಗೆ ಹೊಸದೇನೂ ಅಲ್ಲ, ಈಗ ಸೇಲ್ಸ್ ಟ್ಯಾಕ್ಸ್ ಸಾಧಾರಣವಾಗಿ ಅಧಿಕ ರೂಪದಲ್ಲಿ ಬಂದಿದ್ದಾಗಿದೆಯೇ ಹೊರತು, ಮತ್ತೇನೂ ಇಲ್ಲ. ಆದರೆ ಸೇಲ್ಸ್ ಟ್ಯಾಕ್ಸ್ ವಿಷಯದಲ್ಲಿ ಮುಖ್ಯವಾಗಿ ವಿಚಾರ ಮಾಡತಕ್ಕಂಥ ಸಂಗತಿ ಏನು ಎಂದರೆ ಈ ಸೇಲ್ಸ್ ಟ್ಯಾಕ್ಸ್ ಮಸೂದೆಯಿಂದ ನಮ್ಮ ಪ್ರಾಂತ ವ್ಯವಹಾರ ಉದ್ಯಮಗಳಿಗೆ ತೊಂದರೆಯಾಗಿ ಎರಡನೆಯ ಪ್ರಾಂತದ ಉದ್ಯಮಗಳಿಗೆ ಏನಾದರೂ ಫಲವಾಗುತ್ತದೆಯೇ ಎಂಬುದು.

ಎರಡನೆಯದಾಗಿ ಈ ಸೇಲ್ಸ್ ಟ್ಯಾಕ್ಸ್ ಈಗ ಸೂಚನೆ ಮಾಡಿದಂತೆ ಷಡ್ಯೂಲ್ ಒಂದು ಟರ್ನ್ ಓವರ್‌ಗೆ ಅನ್ವಯಿಸುತ್ತದೆ. ಇದರಿಂದ ಕನ್‌ಸ್ಯೂಮರ್ ಮೇಲೆ ಏನಾದರೂ ಪರಿಣಾಮವಾಗುತ್ತದೆಯೋ ಏನೋ ಎಂಬ ಸಂಶಯ ಬರುತ್ತದೆ. ಈ ಸೇಲ್ಸ್ ಟ್ಯಾಕ್ಸಿನಿಂದ ಉದ್ಯಮಗಳಿಗೆ ಏನಾದರೂ ತೊಂದರೆಯಾಗುತ್ತದೆಯೇ, ಅಥವಾ ವ್ಯಾಪಾರೋದ್ಯಮಗಳು ಉತ್ತಮ ಸ್ಥಿತಿಗೆ ಬರುತ್ತವೆಯೇ ಎಂಬ ವಿಚಾರಗಳನ್ನು ಈಗ ಪರಿಶೀಲನೆಮಾಡೋಣ. ಬೊಂಬಾಯಿ ಪ್ರಾಂತದಲ್ಲಾಗಲಿ ನಮ್ಮ ಮದ್ರಾಸು ಸಂಸ್ಥಾನದಲ್ಲಾಗಲಿ ಅಥವಾ ಇನ್ನಿತರ ನೆರೆಹೊರೆಯ ಸಂಸ್ಥಾನಗಳಲ್ಲಾಗಲಿ ಸೇಲ್ಸ್‌ಟ್ಯಾಕ್ಸ್ ಯಾವ ರೀತಿ ಇದೆ, ಅಲ್ಲಿ ಏನಾದರೂ ಸೇಲ್ಸ್ ಟ್ಯಾಕ್ಸ್ ಹೆಚ್ಚಿದೆಯೆ ಅಥವಾ ಯಾವ ಪದಾರ್ಥಗಳ ಮೇಲೆ ಟ್ಯಾಕ್ಸು ಹೆಚ್ಚಿದೆ ಎಂಬುದನ್ನು ನೋಡಬೇಕು. ಪರದೇಶದಿಂದ ಅಲ್ಲಿಗೆ ಬರುವಂಥ ದಿನಸಿ ಯಾವುದೇ ಆಗಲಿ, ಅವುಗಳಿಗೆ ಅಲ್ಲಿ ಕಡಮೆ ಟ್ಯಾಕ್ಸ್ ಇದ್ದು ಇಲ್ಲಿ ಹೆಚ್ಚು ಟ್ಯಾಕ್ಸ್ ಇದ್ದರೆ ಅದರಿಂದ ವ್ಯಾಪಾರಕ್ಕೆ ಧಕ್ಕೆ ಬರುತ್ತದೆ. ಆದ್ದರಿಂದ ಸಾಧ್ಯವಾದ ಮಟ್ಟಿಗೂ ಬೊಂಬಾಯಿ ಮತ್ತು ಆಂಧ್ರ ಪ್ರಾಂತಗಳಲ್ಲಿ ಈ ಟ್ಯಾಕ್ಸು ನಮಗಿಂತಲೂ ಜಾಸ್ತಿಯಾಗಿದೆಯೇ ಎಂಬುದನ್ನು ನೋಡಬೇಕು. ಮಾನ್ಯ ಅರ್ಥ ಸಚಿವರು ಕೆಲವು ಐಟಂಗಳ ಮೇಲೆ ಈಗ ಏನು ಟ್ಯಾಕ್ಸ್ ಹಾಕಬೇಂದಿದ್ದಾರೋ ಅದರಿಂದ ಯಾವ ರೀತಿಯಲ್ಲಿಯೂ ನಮ್ಮ ಉದ್ಯಮಕ್ಕೆ ತೊಂದರೆಯಾಗುವುದಿಲ್ಲ ಎಂದು ಈ ಮಸೂದೆಯನ್ನು ತಂದಿದ್ದಾರೆ. ಇದಕ್ಕೆ ಮುಖ್ಯವಾಗಿ ಅನುಮೋದನೆಯನ್ನು ಕೊಡುವುದಕ್ಕೆ ಏನೂ ಅಭ್ಯಂತರವಿಲ್ಲ. ಅದನ್ನು ಕೊಡುತ್ತೇನೆ.

ಇನ್ನು ಮೂರನೆಯದಾಗಿ ಕನ್‌ಸ್ಯೂಮರ್ಸ್ ಮೇಲೆ ಈ ಇನ್ಸಿಡೆನ್ಸ್ ಆಫ್ ಟ್ಯಾಕ್ಸೇಷನ್ ಬೀಳುತ್ತದೆಯೇ ಎಂದು ನೋಡಿದರೆ ಬೊಂಬಾಯಿಯಲ್ಲಿ ಇಂತಹ ಇನ್ಸಿಡೆನ್ಸ್ ಆಫ್ ಟ್ಯಾಕ್ಸ್‌ಪರಮಾವಧಿ ತೆರಿಗೆ ಒಂದು ರೂಪಾಯಿಗೆ ಮೂಕ್ಕಾಲು ಆಣೆ ಇದೆ. ಕೆಲವಕ್ಕೆ ಅಲ್ಲಿ ಒಂದು ರೂಪಾಯಿಗೆ ಅರ್ಧ ಆಣೆಯಂತೆ ತೆರಿಗೆ ಈಗಲೂ ಇದೆ. ಇದನ್ನು ನೋಡಿದರೆ ಇಲ್ಲಿನ ಕನ್‌ಸ್ಯೂಮರ್‌ಮೇಲೆ ತೆರಿಗೆ ಕಡಮೆಯಾಗಿದೆ. ಬೊಂಬಾಯಿಯಲ್ಲಿ ಕನ್‌ಸ್ಯೂಮರ್ಸ್ ಮೇಲೆ ಹೆಚ್ಚಿಗೆ ಟ್ಯಾಕ್ಸ್ ಬೀಳುತ್ತದೆ.

ಶ್ರೀ ಟಿ. ಮರಿಯಪ್ಪ.—ಮಾನ್ಯ ಸದಸ್ಯರು ಬೊಂಬಾಯಿಪ್ರಾಂತ್ಯದ ಸೇಲ್ಸ್ ಟ್ಯಾಕ್ಸ್ ಅಡ್ಮಿನಿಸ್ಟ್ರೇಷನ್ನಿನ ಪಿನ್‌ಪ್ರಿಕ್ಸ್ ಮತ್ತು ಇವೇಷನ್ನನ್ನು ಪ್ರಸ್ತಾಪಿಸಿದರೆ ಚೆನ್ನಾಗಿರುತ್ತದೆ.

ಶ್ರೀ ಕೆ. ಪಿ. ಗದಗ್.— ಇಲ್ಲಿ ಉತ್ತಮತರವಾದ ಟ್ಯಾಕ್ಸ್ ಇದೆ. ಕನ್‌ಸ್ಯೂಮರ್ಸಿಗೆ ಹೆಚ್ಚಿಗೆ ಟ್ಯಾಕ್ಸ್ ಬೀಳುವುದಿಲ್ಲ. ಎನ್ನುವ ಸಂದರ್ಭದಲ್ಲಿ ಬೊಂಬಾಯಿ ಟ್ಯಾಕ್ಸ್ ಉದಾಹರಣೆಯನ್ನು ಕೊಟ್ಟಿದ್ದೇನೆ ಆದರೆ ಬೊಂಬಾಯಿ ಟ್ಯಾಕ್ಸನ್ನೇ ಇಲ್ಲಿಯೂ ಏಕೆ ಮಾಡಲಲ್ಲ ವೆಂದು ನನ್ನ ಸಲಹೆಯಲ್ಲ.

ಶ್ರೀ ಟಿ. ಮರಿಯಪ್ಪ.—ಮಾನ್ಯ ಸದಸ್ಯರು ಬೊಂಬಾಯಿಯಲ್ಲಿ ಟ್ಯಾಕ್ಸು ಜಾಸ್ತಿಯಾಗುತ್ತದೆ ಎಂಬುದನ್ನು ಕ್ಲಾರಿಫೈಮಾಡಿ ಹೇಳಿದರೆ ಬಾಕಿಯವರಿಗೆ ಅರ್ಥವಾಗುತ್ತದೆ.

ಶ್ರೀ ಕೆ. ಪಿ. ಗದಗ್—ಬೊಂಬಾಯಿಯಲ್ಲಿ ಟ್ಯಾಕ್ಸ್ ಏನು ಇದೆಯೋ ಅದು ಕನ್‌ಸ್ಯೂಮರ್ಸ್‌ಗಳ ಮೇಲೆ ವಿಶೇಷವಾಗಿ ಬೀಳುತ್ತದೆ. ಆದರೆ ಇನ್ನು ಒಂದು ವಿಷಯ ಇಲ್ಲಿ ನಾವು ಗಮನಕ್ಕೆ ತೆಗೆದುಕೊಳ್ಳಬೇಕು. ಬೊಂಬಾಯಿಯಲ್ಲಿ ನಮಗೆ ಟರ್ನ್ ಓವರ್ ಟ್ಯಾಕ್ಸ್ ಇಲ್ಲ. ಆದರೆ ಇಲ್ಲಿ ಟರ್ನ್ ಓವರ್ ಟ್ಯಾಕ್ಸ್ ಇದೆ.

ಎಂದರೆ, ಆ ಆಕ್ಟಿನಲ್ಲಿ tax turnover ಮೇಲಿರಲಿಲ್ಲ. ಇಲ್ಲಿ turnover ಮೇಲೆ tax ವಿಧಿಸಿದೆ. Turn over tax ಎಂಬುದು ಪ್ರತ್ಯಕ್ಷವಾಗಿ consumer ಮೇಲೆ ಬೀಳತಕ್ಕುದಲ್ಲ. ಕೇವಲ ವ್ಯಾಪಾರನ್ನನ ಮೇಲೆ ಅದು ಬೀಳತಕ್ಕದು. ಆದ್ದರಿಂದ consumerಗಳ ದೃಷ್ಟಿಯಿಂದ ಇದೇನೂ ವಿರೋಧಿಸತಕ್ಕಂಥಾದ್ದಲ್ಲ. ವ್ಯಾಪಾರನ್ಥರು ಲೈಸೆನ್ಸ್ ಮತ್ತು ರಿಜಿಸ್ಟ್ರೇಷನ್ ಫೀ ರೀತಿಯಲ್ಲಿ 1000 ರೂಪಾಯಿ ಕೂಡ ಕೊಡುವ ಸಂದರ್ಭ ಬರಬಹುದು. ಆದರೂ ವ್ಯಾಪಾರನ್ಥರ ಮೇಲೆಮಾತ್ರಬೀಳುವುದಾಗಿದ್ದು consumers ಮೇಲೆ ಬೀಳುದಿರುವುದರಿಂದ ನಾನು ಈ ಬಿಲ್ಲನ್ನು ಸ್ವಾಗತಿಸುತ್ತೇನೆ. ಅಲ್ಲದೆ ಒಟ್ಟಿನ ಮೇಲೆ ಹೇಳುವುದಾದರೆ, ವ್ಯಾಪಾರನ್ಥರಿಗೆ ಆಗಲಿ ಕೈಗಾರಿಕೆಯವರಿಗೆ ಆಗಲಿ ಪ್ರತಿಕೂಲವಾದಂಥ ಯಾವುದೇ ನಿಯಮಗಳೂ ಇಲ್ಲ. ಆದ್ದರಿಂದ ಅವರೂ ಕೂಡ ಇದನ್ನು ನಮ್ಮತಿನದಿರಲಾರರು, ಸ್ವಾಗತಿಸದಿರಲಾರರು ಎಂದು ನಾನು ಹೇಳಬಯಸುತ್ತೇನೆ.

ಇನ್ನೊಂದು ಕಾರಣದ ಮೇಲೆ ಬೇರೆ ನಾವಿದನ್ನು ಅನುಮೋದಿನಬೇಕಾಗಿದೆ. ಜುಲೈ ಒಂದನೆಯ ತಾರೀಖಿನಿಂದ ಈ ಬಿಲ್ಲು ಬರಲೆಂದು ನಮ್ಮ ಕಡೆಯ ವ್ಯಾಪಾರನ್ಥರೂ ಮತ್ತು ಕೈಗಾರಿಕೋದ್ಯಮಗಳವರೂ ಕೂಡ ಮೈಸೂರು ಸರ್ಕಾರದವರನ್ನು ಒತ್ತಾಯ ಪಡಿಸುತ್ತಿದ್ದಾರೆ. ಇದಕ್ಕೆಕಾರಣವಿಷ್ಟೆ. ಕಳೆದ ನವೆಂಬರ್ ತಿಂಗಳಿನಿಂದ ನಮ್ಮ ಕಡೆಯ ಭಾಗಗಳು ಸೇರಿ ಹೊಸ ಮೈಸೂರು ಪ್ರಾಂತ್ಯ ರಚನೆಯಾದರೂ, ನಾವು ಮೈಸೂರು ಪ್ರಾಂತ್ಯದಲ್ಲಿದ್ದರೂ ಮೈಸೂರು

(ಶ್ರೀ ಕೆ. ಪಿ. ಗದಗ್)

ಸೇಲ್ಸ್ ಟಾಕ್ಸ್ ಬಿಲ್ ಅನ್ನುಯಿಸುತ್ತಿಲ್ಲ. ನಾವು ಮುಂಚೆ ಬೊಂಬಾಯಿ ಪ್ರಾಂತ್ಯದವರಾದರೂ, ಈಗ ಪರಪ್ರಾಂತ್ಯದವರೆಂದು ಪರಿಗಣಿಸಲ್ಪಟ್ಟು ನಾವು ಲೈಸೆನ್ಸಿಸ್ ಇಲ್ಲದಿರುವವರಾಗಿ ನಮ್ಮಿಂದ ಟ್ಯಾಕ್ಸ್ ವಸೂಲು ಮಾಡುತ್ತಿದ್ದಾರೆ. ಇದರಿಂದಾಗಿ ಕೆಲವು ಕಾಲ ನಮ್ಮ ಭಾಗದಲ್ಲಿ ವ್ಯಾಪಾರವೇ ತಟಸ್ಥವಾಗುವುದರಲ್ಲಿತ್ತು. ಈ ಕಾರಣ ನಮ್ಮ ಕಡೆಯವರು ತೀವ್ರವಾಗಿ ಈ ಬಿಲ್ಲನ್ನು ತನ್ನಿರೆಂದು ಒತ್ತಾಯ ಪಡಿಸುತ್ತಿದ್ದಾರೆ. ಈ ಎಲ್ಲ ಕಾರಣಗಳಿಂದ ನಾನು ಇದನ್ನು ಸ್ವಾಗತಿಸುತ್ತಾ ಒಂದೆರಡು ಸಲಹೆಗಳನ್ನು ನಾನು ಕೊಡಬಯಸುತ್ತೇನೆ.

9ನೆಯ ಪುಟದಲ್ಲಿ 5 (7) ನೆಯ ವಿಧಿಯಲ್ಲಿ,

"The tax for each year may be assessed, levied and collected in advance during the year in monthly instalments."

ಎಂದು ಹೇಳಿದೆ. ಎಂದರೆ, ಪ್ರತಿತಿಂಗಳೂ, ಅಂದಾಜು ಮೇಲೆ ವರ್ಷಕ್ಕೆ ಎಷ್ಟು ಟಾಕ್ಸ್ ಕೊಡಬೇಕಾಗುತ್ತದೋ ಅದನ್ನು ಹಂಚಿಕೊಂಡು ಕಂತು ಪ್ರಕಾರ ಕೊಡಬೇಕಾಗುತ್ತದೆ. ಹೀಗೆ ಪ್ರತಿ ತಿಂಗಳೆಂದು ವಿಧಿಸುವುದಕ್ಕೆ ಬದಲು, ಮೂರು ತಿಂಗಳಿಗೊಮ್ಮೆ ಎಂದು ಇಟ್ಟರೆ ಉತ್ತಮ. ಹಾಗಿಲ್ಲದಿದ್ದರೆ, ವ್ಯಾಪಾರಸ್ಥರು ಪ್ರತಿ ತಿಂಗಳೂ ಒಂದು Return ಕಳುಹಿಸಬೇಕೆಂದರೆ ಬಹಳ ಕಷ್ಟ. ಬೊಂಬಾಯಿಯಲ್ಲಿ Quarterly ಯೆಂತಲೇ ಇತ್ತು. ಯಾವುದೇ ರೀತಿಯ ಟ್ಯಾಕ್ಸ್ ಇರಲಿ ತಮ್ಮ ರಿಟರ್ನ್ ಪ್ರಕಾರ quarterlyಯಾಗಿ ಹಣ ಕೊಡುತ್ತಿದ್ದರು. ಅದೇ ರೀತಿಯ ವ್ಯವಸ್ಥೆಯನ್ನು ಇಲ್ಲಿಯೂ ತಂದರೆ ಉತ್ತಮವೆಂದು ನಾನು ಸೂಚಿಸುತ್ತೇನೆ.

ಇದಲ್ಲದೆ, 8ನೆಯ ಪುಟದಲ್ಲಿ,

"The State Government may by notification amend Schedule II—

(*a*) by the deletion of any goods specified therein ;

(*b*) by the addition of any goods and specify the rate at which the tax is payable in respect of such goods, subject to the condition that the rate so specified shall in no case exceed ten per cent of the turnover."

ಎಂದು ಹೇಳಿದೆ. ಇಂಥದೊಂದು ಅವಕಾಶ ತಮಗೆ ಏಕೆ ಬೇಕಾಗುತ್ತದೋ ಗೊತ್ತಿಲ್ಲ. ಇಂಥ ಅಧಿಕಾರ ವನ್ನು ಇಟ್ಟುಕೊಳ್ಳದೆ, ಪುನಃ ಏನಾದರೂ ಈ ರೀತಿ ಅದಲುಬದಲು ಮಾಡುವ ಪ್ರಸಂಗ ಬಂದರೆ, ಆಗ್ಗೆ ಬೇರೊಂದು ತಿದ್ದುಪಡಿಯನ್ನು ತಂದು ಪಾಸುಮಾಡ ಬಹುದೆಂದು ಸೂಚಿಸಿದ್ದರೆ ಚೆನ್ನಾಗಿತ್ತು. ಆದ್ದರಿಂದ ಈ ಅಧಿಕಾರವನ್ನು ಈಗಲೂ ತಾವು ತೆಗೆದುಕೊಳ್ಳುವುದನ್ನು ಬಿಟ್ಟು ಬಿಡುವುದು ಸೂಕ್ತವೆಂದು ನಾನು ಹೇಳುತ್ತೇನೆ.

ಇನ್ನು ಅನೇಕ ವಿಷಯಗಳನ್ನು ಈ ಬಿಲ್ಲಿನ ಸಂದರ್ಭದಲ್ಲಿ ಹೇಳಬಹುದಾಗಿತ್ತು. ಆದರೆ ಕೂಲಂಕಷವಾಗಿ ನಾನು ಈ ಬಿಲ್ಲನ್ನು ಓದಿ ನೋಡಿಲ್ಲ. ಏನೇ ಆಗಲಿ ಇಷ್ಟು ತ್ವರಿತವಾಗಿ ಈ ಬಿಲ್ಲನ್ನು ತಂದಿದ್ದಕ್ಕಾಗಿ ನಾನು ಸರ್ಕಾರದವರನ್ನು ಅಭಿವಂದಿಸುತ್ತೇನೆ.

*ಶ್ರೀ ಎಚ್. ವಿ. ಕೌಜಲಗಿ.—ಮಾನ್ಯ ಅಧ್ಯಕ್ಷರೇ, ಈ ಸಭೆಯ ಮುಂದಿರುವ ಸೇಲ್ಸ್ ಟ್ಯಾಕ್ಸ್ ಮಸೂದೆಯನ್ನು ನಾನು ಅನುಮೋದಿಸುತ್ತೇನೆ. ಇದರಲ್ಲಿರತಕ್ಕ ಮುಖ್ಯವಾದ ಅಂಶಗಳನ್ನು ನನ್ನ ಪಿತ್ರರಾದ ಶ್ರೀಮಾಡಗದಗ್ ಅವರು ಆಗಲೇ ಹೇಳಿದ್ದಾರೆ. ನಮ್ಮ ಹೊಸ ಪ್ರಾಂತ್ಯವಾದ ಅನಂತರ, ಈ ಐದು ಭಾಗಗಳಲ್ಲಿ ಬೇರೆ ಬೇರೆ ರೀತಿಯ ಕರಗಳಿದ್ದುದನ್ನು ಒಟ್ಟುಗೂಡಿಸಿ ಒಂದೇ ರೀತಿಯ ಕಾಯಿದೆಯನ್ನು ಮಾಡುವುದು ಅನಿವಾರ್ಯವಾಗಿದೆ. ಈ ಬಗ್ಗೆ ಮಾನ್ಯ ಮಂತ್ರಿಗಳು ಆದಷ್ಟು ತೀವ್ರವಾಗಿ ಜಂಕಿ ಸಂಖ್ಯೆಗಳನ್ನು ಮತ್ತು ನಾನಾ ಭಾಗಗಳಲ್ಲಿರುವ ಕಾಯಿದೆಗಳನ್ನು ಶೇಖರಿಸಿ ಒಂದು ಏಕ ರೀತಿಯ ಕಾನೂನು ಅಳವಡಿಸಿರುವುದು ನಿಜವಾಗಿಯೂ ಶ್ಲಾಘನೀಯವಾಗಿದೆ. ಸಾಮಾನ್ಯವಾಗಿ ಯಾವುದೇ ಬಿಲ್ಲನ್ನು ತೆಗೆದು ಕೊಳ್ಳಲು ಅದರಲ್ಲಿ ಕೆಲವು ವಾದಗ್ರಸ್ತ ವಿಷಯಗಳು ಇದ್ದೇ ಇರುತ್ತವೆ. ಈಗಲೂ ಯಾವುದೇ ಪ್ರಾಂತ್ಯದ ಸೇಲ್ಸ್ ಟಾಕ್ಸ್ ಕಾನೂನನ್ನು ತೆಗೆದುಕೊಳ್ಳಲು, ಅದು consumerಗಳಿಗೂ ವ್ಯಾಪಾರಸ್ಥರಿಗೂ ಇಬ್ಬರಿಗೂ ಅನುಕೂಲವಾಗಿದೆಯೆಂದು ಹೇಳುವುದಕ್ಕೆ ಸಾಧ್ಯವಿಲ್ಲ. ಇಂಥ ಪ್ರಸಂಗದಲ್ಲಿ ಮಾನ್ಯ ಸಚಿವರು ಈ ಐದು ಭಾಗಗಳಲ್ಲರತಕ್ಕ ಕಾಯಿದೆಗಳನ್ನು ಒಂದು ಗೂಡಿಸಿ ಎಲ್ಲದರಲ್ಲಿನ ಒಳ್ಳೆಯ ವಿಷಯಗಳನ್ನು ತೆಗೆದುಕೊಂಡು ಆದಷ್ಟು ಮಟ್ಟಿಗೆ ಯಾರಿಗೂ ಹೆಚ್ಚಿನ ತೊಂದರೆಯಾಗದಿರುವ ರೀತಿಯಲ್ಲಿ ತಂದಿಟ್ಟಿದ್ದಾರೆ. ಉದಾಹರಣೆಗೆ ಹೇಳುವುದಾದರೆ ಬೊಂಬಾಯಿಯ ಕಾಯಿದೆ ವ್ಯಾಪಾರಸ್ಥರ ದೃಷ್ಟಿಯಿಂದ ಬಹಳ ಕಷ್ಟವಾಗುತ್ತಿತ್ತು. ಆದ್ದರಿಂದ ಈ ಬಿಲ್ಲು ಒಟ್ಟಿನಲ್ಲಿ ಸ್ವಾಗತಾರ್ಹವಾಗಿದೆ, ಆದರೆ, ಈ ಬಿಲ್ಲಿನಲ್ಲಿ ಇಂಥದೇ ರೀತಿಯಲ್ಲಿ ಲೆಕ್ಕಪಡಬೇಕು ಮತ್ತು ತಿಂಗಳು ತಿಂಗಳಿಗೂ ಲೆಕ್ಕ ಪತ್ರಗಳನ್ನು ತೋರಿಸಬೇಕು ಎಂದು ನಾನಾ ಪಾರ್ಟುಗಳನ್ನು ಮಾಡಿರುವುದು ಸಾಮಾನ್ಯವಾಗಿ ಸಣ್ಣ ವ್ಯಾಪಾರಸ್ಥರಿಗೆ ಬಹಳ ಕಷ್ಟವಾಗುತ್ತದೆ. ಅಂಥ ಸಣ್ಣ ವ್ಯಾಪಾರಸ್ಥರೂ ಒಬ್ಬ ಕ್ಲಾರ್ಕ್ ಇಡಬೇಕೆಂದರೆ ಬಹಳ ಕಷ್ಟ. ಇದು ಈ ಕಾಯಿದೆಯಲ್ಲರತಕ್ಕ ನಿಯಮಗಳಲ್ಲಿ ಬಹಳ ಗಡುಸಾದ ಭಾಗವಾಗಿದೆ.

1-30 P.M.

ಎರಡನೆಯದಾಗಿ ಈ ನಮ್ಮ ಪ್ರಾಂತದಲ್ಲಿ ಕೆಲ ಕೆಲವು ವಸ್ತುಗಳ ಮೇಲೆ ಕರಗಳು ಬಿದ್ದಿವೆ ಮತ್ತು ಕೆಲ ಕೆಲವು ವಸ್ತುಗಳ ಮೇಲೆ ಕರಗಳು ಬಿದ್ದಿಲ್ಲ. ಇವುಗಳನ್ನು ಗಮನಿಸಿ ಶಕ್ಯವಿದ್ದಷ್ಟು ಕನ್ಸ್ಯೂಮರ್ ಅಥವಾ ಕೊಂಡುಕೊಳ್ಳುವವನ ಮೇಲೆ ಲಕ್ಷವಿಟ್ಟು ವಸ್ತುಗಳ ಮೇಲೆಯೂ ಕರವನ್ನು ವಿಪರೀತವಾಗಿ ಹಾಕಬಾರದು. ಈಗಾಗಲೇ ಲಕ್ಕುರಿ ಗುಡ್ಸ್‌ಗಳ ಮೇಲೆ ಕರಗಳನ್ನು ಹಾಕಿದ್ದಾಗಿದೆ.

ಇನ್ನು ಮೂರನೆಯದು ಏನೆಂದರೆ ನಮ್ಮ ನೆರೆ ಹೊರೆಯ ಪ್ರಾಂತದಲ್ಲಿ ಕರಗಳಲ್ಲಿ ವ್ಯತ್ಯಾಸವಿರುವುದರಿಂದ ನಮ್ಮ ಪ್ರಾಂತದಲ್ಲಿ ವ್ಯಾಪಾರವಾದ ಪದಾರ್ಥಗಳು ಎರಡನೆಯ ಪ್ರಾಂತಕ್ಕೆ ಹೋಗುವುದಕ್ಕೆ ಅವಕಾಶವಾಗಿದೆ. ಈ ರೀತಿ ವ್ಯಾಪಾರದಿಂದ ಅನೇಕ ಕಷ್ಟಗಳುಂಟಾಗುತ್ತವೆ. ಆದುದರಿಂದ ಈ ರೀತಿ ಕರಗಳಲ್ಲಿ ವ್ಯತ್ಯಾಸಗಳು ಇರಬಾರದು. ಇದ್ದರೆ, ಇದರ ದೆಸೆಯಿಂದ ಬ್ಲಾಕು ಮಾರ್ಕೆಟ್ಟು ವ್ಯಾಪಾರ ಹೆಚ್ಚಾಗಲು

ಅವಕಾಶವಾಗುತ್ತದೆ ಮತ್ತು ಹೀಗೆ ಹೆಚ್ಚಿನ ಪದಾರ್ಥಗಳು ಹೊರಕ್ಕೆ ಹೋದರೆ ಬರುವ ಟ್ಯಾಕ್ಸುಗಳು ಕೂಡ ತಪ್ಪಿ ಹೋಗುವ ಸಂಭವವಿದೆ. ಈ ತರಹದ ಪರಸ್ಥಿತಿ ಬಾರದ ಹಾಗೆ ಮತ್ತು ಈ ಕರಗಳು ತಪ್ಪಿ ಹೋಗದ ಹಾಗೆ ಮಾನ್ಯ ಸಚಿವರು ಲಕ್ಷ್ಯವಿಟ್ಟು ಒಂದು ವ್ಯವಸ್ಥೆ ಮಾಡಿದ್ದಾರೆ. ಈ ಕಾಯಿದೆಯಲ್ಲಿಯೇ ಮಲ್ಟಿ ಪಾಯಿಂಟ್ ಟ್ಯಾಕ್ಸ್ ಆನ್ ಟರ್ನ್ ಓವರ್ ಎಂದಿರುವುದರಿಂದ ಶಕ್ಯವಿದ್ದಷ್ಟು ಕನ್ಸ್ಯೂಮರ್ ಮೇಲೆ ಪ್ರತ್ಯಕ್ಷ ಕರ ಬೀಳುವುದಿಲ್ಲ. ಕೆಲ ಕೆಲವು ಬಾಬುಗಳಲ್ಲಿ ವ್ಯಾಪಾರಸ್ಥನು ತನ್ ಕಮಿಷನ್ ಅಪ್ರೋರ್ಷನ್ ಮೆಂಟಿನ ಮೇಲೆ ಕೊಡಬೇಕಾಗಿ ಬರುವುದರಿಂದ ಕನ್ಸೂಮರ ಮೇಲೆ ಬೀಳುತ್ತದೆ. ಇದು ತಪ್ಪು ಎನ್ನಬಹುದು. ಕನ್ಸ್ಯೂಮರ್ ಮೇಲೆ ಬೀಳಬಹುದಾದರೂ ಬಹಳ ರಿಮೋಟ್ ಇಂಡೈರಕ್ಟ್ ಟ್ಯಾಕ್ಸು. ಇದರಲ್ಲಿ ಎಷ್ಟು ಕನ್ಸೂಮರ್ ಮೇಲೆ ಬೀಳುತ್ತದೆ ಎಷ್ಟು ವ್ಯಾಪಾರಸ್ಥನ ಮೇಲೆ ಬೀಳುತ್ತದೆ ಹೇಳಲಿಕ್ಕಾಗುವುದಿಲ್ಲ.

ಇನ್ನು ಈ ಕಾಯಿದೆಯಲ್ಲಿ ವ್ಯಾಪಾರಸ್ಥರಿಗೆ ಟಾಕ್ಸ್ ಕಾಂಪೊಸಿಷನ್ ಮಾಡಿಕೊಳ್ಳುವುದಕ್ಕೆ ಸಾಲಭ್ಯಗಳನ್ನು ಕೊಡಲಾಗಿದೆ. ಅವನು ರಶೀತಿ ಕೊಡದೆ ಇರುವುದರಿಂದ ಮ್ಯಾಕ್ಸಿಮಂ ಮತ್ತು ಮಿನಿಮಂ ಎಷ್ಟು ಎಂಬುದನ್ನು ತಿಳಿಯುವುದಕ್ಕೆ ಸಾಧ್ಯವಾಗುವುದಿಲ್ಲ. ಈ ತರಹ ರಶೀತಿ ಕೊಡುವ ಪದ್ಧತಿ ಒಳ್ಳೆಯದು. ಈಗ ಮದರಾಸು ಕಾಯಿದೆಯಲ್ಲಿ ವಿಚಾರಮಾಡಿದರೆ ಪ್ರತಿಯೊಂದು ಐಟಮ್ಮಿಗೂ ಅವನು ರಶೀತಿ ಕೊಡಬೇಕಾಗಿದೆ. ಆದರೆ ಇಲ್ಲಿ ಇಪ್ಪತ್ತು ಸಾವಿರ ರೂಪಾಯಿಗಳ ವರೆಗೆ ಅವನು ರಶೀತಿ ಕೊಡುವ ಭಯವಿಲ್ಲ. ದುಡ್ಡು ಎಷ್ಟು ಬಂದಿದೆ ಮತ್ತು ಎಷ್ಟು ಮಾರಿದರು ಎಂಬುದಕ್ಕೆ ಗುರುತು ಪಟ್ಟಿ ಕೇಳುವುದಿಲ್ಲ. ಈ ಕಾಯಿದೆಯಲ್ಲಿ ಒಂದು ದೋಷವಿದೆ. ಅದೇನೆಂದರೆ ಎಂದಿಗೂ ಒಟ್ಟು ವ್ಯಾಪಾರಸ್ಥನು ಅವನು ಕೊಡುವ ರೊಕ್ಕವನ್ನು ಸರಿಯಾಗಿ ಕೊಡುವುದಿಲ್ಲ. ಅದರಿಂದಾಗಿ ಈ ಸೇಲ್ಸ್ ಟ್ಯಾಕ್ಸುಕೊಡದ ಹಾಗೆ ತಪ್ಪಿಸಿಕೊಳ್ಳಲು ಶಕ್ಯವಿದೆ. ಆದ ಕಾರಣ ಸರ್ಕಾರ ಈ ಬಗ್ಗೆ ಸರಿಯಾದ ವ್ಯವಸ್ಥೆ ಮಾಡಬೇಕಾದುದು ಅವಶ್ಯಕ. ಈ ವ್ಯಾಪಾರಸ್ಥನಗದು ವ್ಯಾಪಾರ ಮಾಡುವಾಗ ಕರ ಕೊಡಲು ತಪ್ಪಿಸಿಕೊಳ್ಳಬಹುದು. ಈ ಬಗ್ಗೆ ನಿಯಮಗಳನ್ನು ಮಾಡುವಾಗ ಸರ್ಕಾರ ಎಚ್ಚರಿಕೆಯಿಂದರಬೇಕು. ಅಲ್ಲದೆ ಈಗ ಮಿತಿಯನ್ನು ಇಪ್ಪತ್ತು ಸಾವಿರ ರೂಪಾಯಿಗಳವರೆಗೆ ಇಟ್ಟಿರುವುದರಿಂದ ಆಫೀಸರುಗಳು ವ್ಯಾಪಾರಸ್ಥರು ರಾಜಿ ಮಾಡಿಕೊಂಡು, ನೂರು ರೂಪಾಯಿಗಳ ಟ್ಯಾಕ್ಸ್ ಕೊಡಬೇಕಾಗಿದ್ದರೆ ತನಗೆ ಐವತ್ತು ಅವರಿಗೆ ಐವತ್ತು ಎನ್ನುವ ಹಾಗೆ ಮಾಡಿಕೊಂಡು ಕರವನ್ನು ಕಡಮೆ ಮಾಡುವ ಸಂಭವವಿದೆ. ಈ ರೀತಿಯ ಅನೇಕ ಉದಾಹರಣೆಗಳನ್ನು ಕೊಡಬಹುದು . . . . . .

ಶ್ರೀ ಟಿ. ಮರಿಯಪ್ಪ.—ಗೆಜೆಟೆಡ್ ಅಧಿಕಾರಿಗಳಿಗೆ ಮಾತ್ರ ಅಧಿಕಾರ ಕೊಟ್ಟಿದ್ದೇವೆ. ತಾವು ಇನ್ನೇನಾದರೂ ಸಲಹೆ ಕೊಟ್ಟರೆ ಅದನ್ನು ಸಹ ಯೋಚನೆ ಮಾಡಲಾಗುವುದು. ಸ್ಮಾಲ್ ಡೀಲರುಗಳಿಗೆ ಕಾಂಪೊಸಿಷನ್ ಕೊಡುವ ಸಲುವಾಗಿ ಪ್ರಾವಿಷನ್ ಮಾಡಿದೆ. ತಾವು ಮತ್ತೇನಾದರು ಸಲಹೆಯನ್ನು ಕೊಟ್ಟರೆ ಅದನ್ನು ಪರಿಶೀಲಿಸಬಹುದು.

ಶ್ರೀ ಎಚ್. ವಿ. ಕೌಜಲಗಿ.—ಆಫೀಸರುಗಳನ್ನು ನೇಮಿಸಿರುವುದರಿಂದ ತೊಂದರೆಯಾಗಿದೆ ಎಂದಲ್ಲ, ಡಿಪಾರ್ಟುಮೆಂಟಿನವರು ನೋಟಿಫಿಕೇಷನ್ನಿನ ಪ್ರಕಾರ ನೇಮಿಸುತ್ತಾರೆ. ಅವರು ಗೆಜೆಟೆಡ್ ಅಧಿಕಾರಿಗಳಾಗಬಹುದು ಅಥವಾ ನಾನ್ ಗೆಜೆಟೆಡ್ ಅಧಿಕಾರಿಗಳಾಗಬಹುದು. ಆದರೆ ಕೆಲವೇ ಅಧಿಕಾರಿಗಳಿಗೆ ಈ ಪವರುಗಳನ್ನು ಕೊಡ ಬೇಕು. ಪ್ರತಿಯೊಂದು ಅಧಿಕಾರಿಯೂ ಕೂಡ ಪ್ರಮಾಣಿಕನಾಗಿರುವನೆಂದು ಹೇಳಲಿಕ್ಕಾಗುವುದಿಲ್ಲ. ಅಷ್ಟೇ ನನ್ನ ಸೂಚನೆ.

ಇನ್ನು ಸರ್ಕಾರದವರು ಬಡವರ ಹಿತದೃಷ್ಟಿಯಿಂದ ಅವರಿಗೆ ಉಪಯೋಗವಾಗುವ ಎಷ್ಟೋ ಆರ್ಟಿಕಲ್ಸ್‌ಗಳ ಮೇಲೆ ಎಗ್ಜೆಂಪ್ಷನ್ ಕೊಟ್ಟಿದ್ದಾರೆ. ಅವು ಷೆಡ್ಯೂಲು ಮೂರರಲ್ಲಿವೆ. ಇದರ ಬಗ್ಗೆ ಶ್ರೀನಿವಾಸು ಮಿನಿಸ್ಟರು ತಮ್ಮ ಭಾಷಣದಲ್ಲಿಯೂ ಹೇಳಿದ್ದಾರೆ. ಅದಕ್ಕಾಗಿ ಅವರಿಗೆ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಇದನ್ನು ಇನ್ನೂ ಸ್ವಲ್ಪ ಎಕ್ಸ್‌ಟೆಂಡು ಮಾಡಿ ಇನ್ನೂ ಕೆಲವು ವಸ್ತುಗಳನ್ನು ಈ ಪಟ್ಟಿಯ ಜೊತೆಗೆ ಸೇರಿಸ ಬೇಕೆಂದು ನನ್ನ ವಿಜ್ಞಾಪನೆ.

ಈಗಿನ ಹೊಸ ಸರ್ಕಾರದ ಆಯವ್ಯಯದ ಪ್ರಕಾರ ಕೈಗಾರಿಕೆ ಉದ್ಯಮಗಳಿಗೆ ಹೆಚ್ಚು ಲಕ್ಷ್ಯ ಕೊಟ್ಟಿದ್ದಾರೆ. ಹ್ಯಾಂಡ್ ಲೂಮ್ಸ್‌ನಿಂದ ತಯಾರಾದ ಬಟ್ಟೆ ಪಗ್ಯೆರೆಗೆ ಎಗ್ಜೆಂಪ್ಷನ್ ಕೊಟ್ಟಿದ್ದೀರಿ. ಅದೇ ರೀತಿಯಾಗಿ ಗಾಣದಿಂದ ತಯಾರಾದ ಎಣ್ಣೆ ಕೈಯಿಂದ ತಯಾರಾದ ವಸ್ತುಗಳಿಗೆ ಏಕೆ ಅದನ್ನು ಕೊಡಬಾರದು ? ಯಾವ ತತ್ತ್ವದ ಮೇಲೆ ಈ ತರದ ಸಾಮಾನುಗಳಿಗೆ ಎಗ್ಜೆಂಪ್ಷನ್ನು ಕೊಡಬೇಕೆಂದು ಮಾಡಿದ್ದೀರೋ ಅದೇ ತತ್ತ್ವದ ಮೇಲೆ ಈ ಮೇಲೆ ಹೇಳಿದ ವಸ್ತುಗಳಿಗೂ ವಿನಾಯಿತಿ ಕೊಡುವುದು ಯುಕ್ತವೆಂದು ನನಗೆ ನಿಸುತ್ತದೆ.

ಶ್ರೀ ಟಿ. ಮರಿಯಪ್ಪ.—ಖಾದಿ ಅಂಡ್ ವಿಲೇಜು ಇಂಡಸ್ಟ್ರೀಸ್ ಬೋರ್ಡಿನವರು ಏನೇನು ಸಾಮಾನುಗಳನ್ನು ವಿಶದೀಕರಿಸಿದ್ದಾರೋ ಅವುಗಳೆಲ್ಲ ಬರುತ್ತವೆ. ಈಗ ತಾವು ಗ್ರಾಮಾಂತರ ಪ್ರದೇಶಗಳ ಕೈಗಾರಿಕೆಗಳ ಬಗ್ಗೆಯೂ ಸೂಚನೆ ಕೊಟ್ಟಂತಿದೆ. ತಾವು ದಯವಿಟ್ಟು ಅವುಗಳನ್ನು ವಿಶದೀಕರಿಸಿದರೆ ಉತ್ತಮ. ಖಾದಿ ವಿಲೇಜು ಇಂಡಿಸ್ಟ್ರಿಗಳಲ್ಲಿ ಗಾಣವನ್ನು ಸೇರಿಸಿದ್ದರೆ ಸೂಕ್ತವಾಗಿರುತ್ತಿತ್ತು. ಹಾಗೆಯೆ ಒಂದು ಕೋ-ಆಪರೇಟೀವ್ ಸೊಸೈಟಿಯೂ ಇರುತ್ತದೆ. ಆದಕಾರಣ ಸರ್ಕಾರದವರು ಸರಿಯಾಗಿ ಪರಿಶೀಲಿಸಲು ತಾವು ಸರಿಯಾಗಿ ವಿಶದೀಕರಿಸಿದರೆ ಅನುಕೂಲವಾಗುತ್ತದೆ.

ಶ್ರೀ ಹೆಚ್. ವಿ. ಕೌಜಲಗಿ.—ನನ್ನ ಉದ್ದೇಶ ಹೀಗಿತ್ತು. ಗಾಣದ ಎಣ್ಣೆಗೆ ಯಾವ ರೀತಿಯಾದರೂ ವಿನಾಯಿತಿ ಕೊಡುವುದು ಸಾಧ್ಯವೇ ಎಂಬುದು. ಮಾನ್ಯ ಮಂತ್ರಿಗಳು ಹೇಳಿದಂತೆ ಹ್ಯಾಂಡ್‌ಲೂಮು ಇಂಡಸ್ಟ್ರಿಸ್ ಬೋರ್ಡು, ವಿಲೇಜು ಇಂಡಸ್ಟ್ರೀಸ್ ಬೋರ್ಡುಗಳಲ್ಲಿರುವಂತಿಲ್ಲ. ಈ ತರದ ಸಾಮಾನ್ಯ ಗೃಹ ಕೈಗಾರಿಕೆಯ ವಸ್ತುಗಳಿಗೂ ಕೊಡಬಹುದಾಗಿತ್ತು ಅಷ್ಟೆ. ನಮ್ಮ ಪ್ರಾಂತ ಒಕ್ಕಲುತನದ ದೇಶ. ಆದ್ದರಿಂದ ದನಕರುಗಳಿಗೆ ಸಂರಕ್ಷಣೆ ಕೊಡುವುದು ಮುಖ್ಯ. ದನಕರುಗಳಿಗೆ ಉಪಯೋಗವಾಗುವಂತಹ ಕ್ಯಾಟಲ್‌ಫೀಡ್‌ಗಳಾದ ಹಿಂಡಿ, ತವುಡು ಇತ್ಯಾದಿ ಇವುಗಳಿಗೆ ಸರ್ಕಾರದವರು ತೆರಿಗೆಯಲ್ಲಿ ವಿನಾಯಿತಿ ತೋರಿಸಬೇಕಾಗಿದೆ. ಈಗ ಮೆಣಸಿನಕಾಯಿ ಮೇಲೆ ತೆರಿಗೆ ವಿಧಿಸುತ್ತೀರಿ. ಇದಕ್ಕೆ ವಿನಾಯಿತಿ ಕೊಡುವುದಿಲ್ಲವೆಂದು ಹೇಳುತ್ತೀರಿ. ಸಾಮಾನ್ಯವಾಗಿ ಬಡವ ನಂತೆಗೆ ಹೋದರೆ, ಅಲ್ಲ ಅವನು ಏನು ಕೊಂಡುಕೊಳ್ಳುತ್ತಾನೆ ? ಮೊದಲು ಉಪ್ಪು, ಮೆಣಸಿನಕಾಯಿ ; ಪ್ರತಿಯೊಬ್ಬ ಮನುಷ್ಯನಿಗೂ ಇವು ಬಹಳ ಅತ್ಯಾವಶ್ಯಕ. ಇದರಿಂದ ಹೆಚ್ಚು ವರಮಾನ ಬರಲಿ, ಬಾರದಿರಲಿ ಈ ಪದಾರ್ಥಗಳಿಗೆ ತೆರಿಗೆಗಳನ್ನು ವಿಧಿಸಿದರೆ ದೊಡ್ಡ ಅಪವಾದ ಬರುತ್ತದೆ. ಇದರ ಜೊತೆಗೆ ಈ ಪದಾರ್ಥಗಳನ್ನ ಯಾರು ಬೆಳೆಯುತ್ತಾರೋ ಅವರು ಅಗ್ರಿಕಲ್‌ಚರಲ್

(ಎಚ್. ವಿ. ಕಾಜಲಗಿ)

ಇನ್‌ಕಂಟ್ಯಾಕ್ಸ್ ಬೇರೆ ಕೊಡಬೇಕಾಗುತ್ತದೆ—ಹೀಗೆ ಡಬ್ಬಲ್ ಟ್ಯಾಕ್ಸ್ ಆಗುತ್ತದೆ. ಈ ತೆರಿಗೆ ವ್ಯಾಪಾರ ಮಾಡುವವನ ಮೇಲೂ, ಕಂಪನಿಯರ್ಸ್ ಮೇಲೂ ಬೀಳುತ್ತದೆ. ಆದ್ದರಿಂದ ಈ ಮಸೂದೆಯ ಷೆಡ್ಯೂಲ್ (2)ರಲ್ಲಿ ನಮೂದಿಸಿರುವ ಮೆಣಸಿನಕಾಯಿಯ ಮೇಲೆ ವಿಧಿಸುವ ತೆರಿಗೆಯನ್ನು ಡ್ರಾಪ್ ಮಾಡಬಹುದು ಎಂದು ನನಗನ್ನಿಸುತ್ತದೆ.

ಇನ್ನು ಈ ಮಸೂದೆಯ ಕಾನೂನುಗಳನ್ನು ಓದಿ ನೋಡಿದರೆ, ಅದರೊಳಗೆ ಎರಡು ಸಂಶಯಗಳು ನನಗೆ ಬಂದಿವೆ. ಈ ಎರಡು ಸಂಶಯಗಳನ್ನು ಆರ್ಥ ಸಚಿವರು ಉತ್ತರ ಕೊಡುವ ಕಾಲದಲ್ಲಿ ನಿವಾರಣೆ ಮಾಡಬೇಕು. ಮೊದಲನೆಯದಾಗಿ ಈಗ ಈ ಮಸೂದೆಯ ಎರಡನೆಯ ಪುಟದಲ್ಲಿ (j)ನಲ್ಲಿ " to cultivate personally " ಎಂಬುದಕ್ಕೆ ಡೆಫಿನಿಷ್ಷ್ ಕೊಟ್ಟಿದೆ. ಈಗ ಆ ಕಾನೂನು ಎಷ್ಟರಮಟ್ಟಿಗೆ ಅವಶ್ಯಕವಿದೆ ಎನ್ನುವುದು ನನಗಂತೂ ಗೊತ್ತಾಗುವುದಿಲ್ಲ. ಏಕೆಂದರೆ ಅಗ್ರಿಕಲ್‌ಚರಲ್ ಇನ್‌ಕಂಟ್ಯಾಕ್ಸ್ ಆಕ್ಟಿನಲ್ಲಿ ಅದಕ್ಕೆ ಬೇರೆ ವಿವರಣೆ ಕೊಟ್ಟಿದ್ದಾರೆ. ಕಲ್ಟಿವೇಷ್ಷ್ ಡೆಫಿನಿಷ್ಷ್ ಸೇಲ್ಸ್‌ಟ್ಯಾಕ್ಸ್ ಮಸೂದೆಯೊಳಗೆ ಏಕೆ ಬಂತು ? ನಾನು ಎರಡು-ಮೂರು ಸಾರಿ ಪೂರ್ತಿ ಓದಿದೆ, ಏನೂ ತಿಳಿಯಲಿಲ್ಲ. ಎರಡನೆಯದಾಗಿ ಈ ಮಸೂದೆಯ ಪುಟ 24ರಲ್ಲಿ 32ನೆಯ ಸೆಕ್ಷನ್ನಿನಲ್ಲಿ " Assessments, etc., not to be questioned in prosecution " ಎಂದು ಹೇಳಿದ್ದಾರೆ. ಇದು ಸ್ವಲ್ಪ ಕಾಯಿದೆಗೆ ಅಸಮ್ಮತವಾಗುತ್ತದೆಯೋ ಏನೋ ಎಂದನ್ನಿಸುತ್ತದೆ. ಈ ಕಾನೂನು ಪ್ರಕಾರ ಮಾರಾಟ ತೆರಿಗೆಯನ್ನು ವಿಧಿಸಿದ ಸಂದರ್ಭದಲ್ಲಿ ಯಾರೂ ಕ್ರಿಮಿನಲ್ ಕೋರ್ಟಿನಲ್ಲಿ ಇದನ್ನು ಪ್ರಶ್ನಿಸಬಾರದು ಎಂದು ಹೇಳಿದ್ದಾರೆ. ಇದು ಹೇಗೆ? ನ್ಯಾಯವಲ್ಲ. ಈ ರೀತಿಯಾಗಿ ಕಾಯಿದೆಗಳನ್ನು ಮಾಡುವುದು ಅಷ್ಟೇನೂ ಸಮ್ಮತವಾಗಿಲ್ಲ. ಆದ್ದರಿಂದ ಸರ್ಕಾರದವರು ಈ ಕಡೆಗೆ ದಯವಿಟ್ಟು ಲಕ್ಷ್ಯ ಕೊಡಬೇಕು. ನಮ್ಮ ಪ್ರಾಂತದೊಳಗಿರುವ ಐದು ತರಹ ಕಾಯಿದೆಗಳನ್ನು ಒಂದುಗೂಡಿಸಿ ಕಂಪನ್ಯಮರ್ಸ್ ದೃಷ್ಟಿಯಿಂದಾಗಲೀ, ವ್ಯಾಪಾರಗಾರರ ದೃಷ್ಟಿಯಿಂದಾಗಲಿ ಯಾವ ರೀತಿ ಅವರಿಗೆ ಸಹಾಯಮಾಡಿದರೆ ಹೆಚ್ಚು ಅನುಕೂಲವಾಗುತ್ತದೆ ಎಂಬುದನ್ನು ಯೋಚಿಸಿ ಬಾರಿಗೆ ತರುವುದರಿಂದ, ಅವರಿಗೆ ಉಪಯುಕ್ತವಾಗುತ್ತದೆಂಬುದನ್ನು ಸರ್ಕಾರದವರು ಅರಿತು ಕೊಳ್ಳಬೇಕು. ಆ ಕಾರಣದಿಂದ ಈ ಕಾಯಿದೆಯನ್ನು ನಾನು ಸ್ವಾಗತಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

*ಶ್ರೀ ಎಸ್. ಮುನಿರಾಜು (ಚಿಕ್ಕಬಳ್ಳಾಪುರ).—ಅಧ್ಯಕ್ಷರೇ, ಈಗ ಹಣಕಾಸಿನ ಸಚಿವರು ಈ ಸಭೆಯ ಮುಂದೆ ಇಟ್ಟಿರತಕ್ಕ ಸೇಲ್ಸ್‌ಟ್ಯಾಕ್ಸ್ ಮಸೂದೆಯನ್ನು ನಾನು ಸ್ವಾಗತಿಸುತ್ತಾ ಕೆಲವು ಸಲಹೆಗಳನ್ನು ಕೊಡಲಿಚ್ಛಿಸುತ್ತೇನೆ. ಮಾನ್ಯ ಸದಸ್ಯರನೇಕರು ಹೇಳಿರುವ ರೀತಿಯಲ್ಲಿ ನಮ್ಮ ಹೊಸ ರಾಜ್ಯದಲ್ಲಿ ಐದು ವಿವಿಧ ಪ್ರಾಂತಗಳು ಸೇರಿ ಐದು ಕಾನೂನುಗಳನ್ನು ನಾವು ಆಚರಣೆಯಲ್ಲಿ ಇಟ್ಟುಕೊಂಡಿರುವುದರಿಂದ ತುಂಬ ಕಷ್ಟವಾಗಿದೆ. ಈಗ ಎರಡು ಮೂರು ರೀತಿಯಲ್ಲಿ ಕೊಡುತ್ತಿದ್ದ ತೆರಿಗೆಯನ್ನು ಆದಷ್ಟು ಮಟ್ಟಿಗೆ ಹೋಗಲಾಡಿಸಿ, ಜನರಿಗೆ ಒಂದು ಉಪಕಾರವಾಗುವ ರೀತಿಯಲ್ಲಿ ಮಾನ್ಯ ಸಚಿವರು ಬಹಳ ಎಚ್ಚರಿಕೆಯಿಂದ ಇದನ್ನು ಪರಿಶೀಲಿಸಿ ಈ ಅಧಿವೇಶನದಲ್ಲಿ ಈ ಸಭೆಯು ತನ್ನ ಒಪ್ಪಿಗೆಯನ್ನು ಈ ಮಸೂದೆಗೆ ಕೊಡಲು ನಮ್ಮ ಅವಗಾಹನೆಗೆ ತಂದಿದ್ದಾರೆ. ಐದು ವಿವಿಧ ಪ್ರಾಂತಗಳ ಪೈಕಿ ಈ ತೆರಿಗೆಯ ವಿಷಯದಲ್ಲಿ ಬೊಂಬಾಯಿ ಪ್ರಾಂತದವರಿಗೆ ಅನುಕೂಲವಾಗುತ್ತದೆ. ಕೊಡಗಿನಲ್ಲಿ ಇದು ಇಲ್ಲ. ಈಗ ಇಂಟರ್‌ಡ್ಯೂಸ್ ಮಾಡಬೇಕಾಗಿದೆ. ಆದರೆ ವ್ಯಾಪಾರದ ತೆರಿಗೆ ನಮ್ಮ ದೇಶದ ಎಲ್ಲಾ ಭಾಗಗಳಲ್ಲೂ ಇದೆ. ಪ್ರಪಂಚದ ಇತರ ಅನೇಕ ಪ್ರದೇಶಗಳಲ್ಲಿರತಕ್ಕ ಈ ತೆರಿಗೆಯನ್ನು ಬಹಳ ಜಾಗರೂಕತೆಯಿಂದ ನೋಡಿ ಮಾಡಬೇಕು. ಒಟ್ಟಿನಲ್ಲಿ ಸಮನ್ವಯದಿಂದ ಮಾಡಿದರೆ, ತೆರಿಗೆ ಇನ್ನೂ ಹೆಚ್ಚಿಗೆ ಬರುತ್ತದೆ. ಮೈಸೂರಿನಲ್ಲಿ ಹಿಂದೆ ಏನೊಂದು ಕಾಯಿದೆ ಇತ್ತೋ, ಆ ಕಾಯಿದೆಗಿಂತಲೂ ಇದು ಸ್ವಲ್ಪ ಕಠಿಣವಾಗಿದೆ. ಮುಖ್ಯವಾಗಿ ಐದು ಸಾವಿರ ರೂಪಾಯಿಗಳ ಪರಿಮಿತಿಯನ್ನು ಏಳೂವರೆ ಸಾವಿರ ರೂಪಾಯಿಗಳ ಮಟ್ಟಿಗೆ ಏರಿಸಿ ಅದರ ಮೇಲೆ ವ್ಯವಹಾರ ನಡೆಸಿದರು. ಒಂದು ಸ್ಲಾಬ್‌ರೇಟಿನಂತೆ ತೆರಿಗೆ ಕೊಡಬೇಕೆಂದು ಮಾಡಿದರೆ ಅದರಿಂದ ಅನುಕೂಲವಾಗುತ್ತದೆ. ಆದ್ದರಿಂದ ನಾನು ಸಚಿವರಲ್ಲಿ ಬಿನ್ನೈಸಿಕೊಳ್ಳುವುದೇನೆಂದರೆ, ಐದುಸಾವಿರ ರೂಪಾಯಿಗಳೆಂದು ಇರುವುದನ್ನು ಏಳೂವರೆ ಸಾವಿರ ರೂಪಾಯಿಗಳ ಪರಿಮಿತಿಗೆ ತರುವುದರಿಂದ ಕೆಲವರಿಗೆ ಅದರಿಂದ ಅನುಕೂಲವಾಗಬಹುದು. ಕೆಲವು ಪದಾರ್ಥಗಳ ತೆರಿಗೆಯ ಮೇಲೆ ಹಿಂದಿನ ಮೈಸೂರಿನಲ್ಲಿ ಏನು ವಿನಾಯಿತಿಯನ್ನು ತೋರಿಸಿತ್ತೋ, ಅದಕ್ಕಿಂತ ಹೆಚ್ಚಿಗೆ ಪದಾರ್ಥಗಳಿಗೆ ವಿನಾಯಿತಿಯನ್ನು ತೋರಿಸಿ ಈ ವ್ಯಾಪಾರ ತೆರಿಗೆಯ ಮಸೂದೆಯನ್ನು ಒಪ್ಪಿಕೊಳ್ಳಬೇಕೆಂದು ತಂದಿದ್ದಾರೆ. ಹಿಂದೆ ಯಾವ ಯಾವ ಪದಾರ್ಥಗಳ ಮೇಲೆ ತೆರಿಗೆಗಳನ್ನು ಹಾಕದೆ ಉಳಿದು ಹೋಗಿದೆಯೋ ಅವುಗಳ ಮೇಲೆ ಈಗ ತೆರಿಗೆ ಹಾಕಿದ್ದಾರೆ. ನನ್ನ ಮಿತ್ರರೊಬ್ಬರು ಈ ಬಿಲ್ಲಿನ ಮೂರನೇ ಷೆಡ್ಯೂಲಿನಲ್ಲಿ " All cloth woven on hand-loom exclusively out of handspun yarn and articles made of such cloth " ಎಂಬುದಕ್ಕೆ ತೆರಿಗೆಯನ್ನು ವಿನಾಯಿತಿ ಮಾಡಿದ್ದಾರೆಂದು ಹೇಳಿದರು. ಹ್ಯಾಂಡ್‌ಸ್ಪನ್ ಯಾರ್ನ್ ಅಂದರೆ ನಮ್ಮ ಕೈಮಗ್ಗಗಳಲ್ಲಿ ನಡೆಯುವ ನೂಲು. ಅದೇ ರೀತಿ ಚರಕ ಸಿಲ್ಕಿಗೂ ವಿನಾಯಿತಿ ಕೊಡಬೇಕು. ಅದಕ್ಕೆ ನಾವು ಈಗ ಟ್ಯಾಕ್ಸ್ ಕೊಡಬೇಕಾಗಿದೆ. ಹ್ಯಾಂಡ್ ಸ್ಪನ್ ಯಾರ್ನ್‌ನಿಂದ ಆಗಿರುವ ಬಟ್ಟೆಗೆ ವಿನಾಯಿತಿಯಿದೆ. ಅದೇ ಹ್ಯಾಂಡ್‌ಸ್ಪನ್ ಸಿಲ್ಕ್ ಬಟ್ಟೆಗೆ ಹಿಂದೆ ವಿನಾಯಿತಿ ಇತ್ತು, ಈಗಿಲ್ಲ. ಇದನ್ನು ಸಚಿವರು ಪರಿಗಣಿಸಬೇಕು. ಬೊಂಬಾಯಿ ಪ್ರಾಂತದಲ್ಲಿ ಆಲೂಗಡ್ಡೆ ಮತ್ತು ಈರುಳ್ಳಿ ಮೇಲೆ ತೆರಿಗೆಯಿದೆಯೆಂದು ಇಲ್ಲೂ ಹಾಕಿದ್ದಾರೆ. ಅವೆರಡು ಪದಾರ್ಥಗಳೂ ತರ್ಕಾರಿ ಜೊತೆಗೆ ಸೇರಿ ನಿತ್ಯ ಬಳಕೆಯಲ್ಲರುವುದರಿಂದ, ಅವುಗಳ ಬೆಳೆ ಚೆನ್ನಾಗಿ ಆಗದೆ ಸರಿಯಾದ ಬೆಲೆಯಿಲ್ಲದೆ ಅನನುಕೂಲವಾಗಿರುವುದರಿಂದ ಮತ್ತು ಅವಕ್ಕೆ ಹಿಂದೆ ವಿನಾಯಿತಿ ಕೊಟ್ಟಿದ್ದರಿಂದ ಈಗಲೂ ಕೂಡ ಅದನ್ನು ತರಕಾರಿಗಳಿಗೆ ವಿನಾಯಿತಿ ತೋರಿಸಿರುವಂತೆ ವಿನಾಯಿತಿ ತೋರಿಸತಕ್ಕದಕ್ಕೆ ಅರ್ಹವಾದುವೆಂದು ಭಾವಿಸಿ ಅವಕ್ಕೆ ಈ ತೆರಿಗೆ ಹಾಕಬಾರದೆಂದು ಸೂಚಿಸುತ್ತೇನೆ. ಇದನ್ನು ಪರಿಗಣಿಸಬೇಕು.

ಮುಖ್ಯವಾಗಿ ಈ ಮಸೂದಾ ಕಾನೂನಿನಲ್ಲಿ ತೆರಿಗೆ ಕೊಡುವ ರೀತಿಯಲ್ಲಿ ಮತ್ತು ವಸೂಲು ಮಾಡುವ ರೀತಿಯಲ್ಲಿ ಸರಿಯಾದ ವ್ಯವಸ್ಥೆಮಾಡಿಲ್ಲ, ಬಹಳಮಟ್ಟಿಗೆ ಹೆಚ್ಚಾಗಿ ದುಡುಕಿದ್ದಾರೆ ಎಂದು ಹೇಳಬೇಕಾಗಿದೆ. ಈ ಕಾನೂನು ರೀತ್ಯಾ ತೆರಿಗೆ ವಸೂಲುಮಾಡುವಾಗ ಯಾರು ಕೊಡುವುದಿಲ್ಲವೋ ಅವರನ್ನು ಮ್ಯಾಜಿಸ್ಟ್ರೇಟರ ಪರಮಾವಧಿ ಅಧಿಕಾರಕ್ಕೆ ಗುರಿಮಾಡುವುದು ಖಂಡಿತವಾಗಿಯೂ ನಾಗರಿಕ ದೇಶಕ್ಕೆ ಮರ್ಯಾದೆ ತರತಕ್ಕ

ದ್ವಲ್ಲ. ಒಬ್ಬ ಮನುಷ್ಯನಿಗೆ ಕಾನೂನು ರೀತಿಯಲ್ಲಿ ಸಿವಿಲ್ ಕೋರ್ಟಿಗೆ ಹೋಗುವುದಕ್ಕಿರುವ ಹಕ್ಕನ್ನು ತಪ್ಪಿಸಿ ತೆರಿಗೆ ವಸೂಲು ಮಾಡುವಾಗ ಕ್ರಿಮಿನಲ್ ಕೋರ್ಟಿಗೆ ಹೋಗುವಂತೆ ಮಾಡುವುದನ್ನು ಖಂಡಿತ ಒಪ್ಪುವುದಕ್ಕಾಗುವುದಿಲ್ಲ; ಅದು ಸಾಧುವಾದುದೂ ಅಲ್ಲ. ತೆರಿಗೆ ಕೊಡದಿದ್ದರೆ ಒಬ್ಬ ಮ್ಯಾಜಿಸ್ಟ್ರೇಟರ ಅವಗಾಹನೆಗೆ ತಂದು ತಪ್ಪಿತಸ್ಥನೆಂದು ಘೋಷಿಸಿ ಆರು ತಿಂಗಳ ಶಿಕ್ಷೆ ಅನುಭವಿಸುವಂತೆ ಮಾಡಲು ಕ್ಲಾಜಿನಲ್ಲಿ ಅವಕಾಶ ಮಾಡಿರುವುದು ಸರಿಯಲ್ಲ. ಹಿಂದೆ ಇದೇ ಸಭೆಯಲ್ಲಿ ಆ ವಿಚಾರ ಚರ್ಚೆಯಾಗಿ ಅಂಥ ಶಿಕ್ಷೆಗೆ ಅವಕಾಶವಿದ್ದುದನ್ನು ತಪ್ಪಿಸಿದರು. ಹಾಗಿರುವಾಗ ಮತ್ತೇಕೆ ಇದನ್ನು ಸೇರಿಸಿದರೋ ತಿಳಿಯದು. ಖಂಡಿತವಾಗಿಯೂ ಇದು ಕಾನೂನಿಗೆ ವಿರೋಧ. ಒಬ್ಬ ಮನುಷ್ಯ ಸಾಲ ಕೊಟ್ಟಿದ್ದರೆ ಅದನ್ನು ವಸೂಲು ಮಾಡುವುದಕ್ಕೆ ಮುನ್ಸಿಫ್ ಕೋರ್ಟಿಗೆ ಹೋಗಬಹುದು. ಅದು ಬಿಟ್ಟು ಜೈಲಿಗೆ ಕಳುಹಿಸಲು ಅಧಿಕಾರವಿಟ್ಟುಕೊಳ್ಳುವುದು ಸರಿಯಲ್ಲ. ವರಮಾನ ತೆರಿಗೆಯ ಇಲಾಖೆಯಲ್ಲೂ ಸಹ ಇಂಥ ಅವಕಾಶವಿಲ್ಲ. ಒಬ್ಬ ತೆರಿಗೆದಾರ ಕೊಡಬೇಕಾದ ತೆರಿಗೆ ವಸೂಲು ಮಾಡಬೇಕಾದರೆ ನಾನಾ ಕ್ರಮಗಳಿವೆ; ಇರುವ ಆಸ್ತಿಪಾಸ್ತಿ ಹರಾಜು ಮಾಡಿ ತೆರಿಗೆಯನ್ನು ವಸೂಲು ಮಾಡಬಹುದು. ಹಾಗಿರುವಾಗ ಮಾರಾಟ ತೆರಿಗೆ ವಸೂಲಿಗಾಗಿ ಮ್ಯಾಜಿಸ್ಟ್ರೇಟ್ ಕೋರ್ಟಿಗೆಳೆದು ಬಾಕಿದಾರನಿಗೆ ಆರು ತಿಂಗಳು ಶಿಕ್ಷೆ ವಿಧಿಸಲು ಅವಕಾಶ ಮಾಡಿರುವುದ ಸಾಧುವಲ್ಲ. ಇದನ್ನು ಪುನರಾಲೋಚಿಸಬೇಕಾಗಿದೆ.

ಕೊನೆಯಲ್ಲಿ ಅವಗಾಹನೆಗೆ ತರುವುದು ಕಾಂಪೊಜಿಷ್ಟ್ ಆಫ್ ಟ್ಯಾಕ್ಸ್ ವಿಚಾರ. ಇದರಿಂದ ಅನುಕೂಲವಿದೆ. ಕೊಡಬೇಕಾದ ತೆರಿಗೆಯನ್ನು ಅಧಿಕಾರಿಯು ವಸೂಲು ಮಾಡಬಹುದೇ ವಿನಾ ರಿಯಾಯಿತಿ ತೋರಿಸುವುದಕ್ಕೆ ಅವಕಾಶವಿಲ್ಲ. ಆದ್ದರಿಂದ ಈ ವಿಚಾರದಲ್ಲಿ ಅನುಮಾನ ಬೇಕಾಗಿಲ್ಲ; ಖಂಡಿತ ಇದು ಅನುಮಾನಕ್ಕೆ ಆಸ್ಪದ ಕೊಡುತ್ತದೆಂದು ಕಾಣುವುದಿಲ್ಲ.

ಮತ್ತೊಂದು ವಿಚಾರವೇನೆಂದರೆ, ಈ ಮಸೂದೆಯಲ್ಲಿ ಸೇಲ್ಸ್ ಟ್ಯಾಕ್ಸ್ ಟ್ರಿಬ್ಯುನಲ್ ಎಂಬುದನ್ನೂ ಕೂಡ ಮಾಡಬೇಕೆಂಬ ಒಂದು ಸೂಚನೆಯಿದೆ. ಹಣಕಾಸಿನ ಪರಿಸ್ಥಿತಿ ನೋಡಿ ಈ ವಿಚಾರದಲ್ಲಿ ನಲಹೆ ನೀಡಬೇಕಾಗಿದೆ. ಈಗ ರೆವೆನ್ಯೂ ಬೋರ್ಡು ಈ ಸಂಬಂಧವಾದ ವಿವಾದಗಳನ್ನು ಇತ್ಯರ್ಥಮಾಡುತ್ತಿದೆ. ಆ ಬೋರ್ಡಿಗೇ ಈ ಕೆಲಸವನ್ನೂ ವಹಿಸಿದರೆ ಹೆಚ್ಚಿಗೆ ಖರ್ಚಾಗುವುದು ತಪ್ಪುತ್ತದೆ, ಪ್ರತ್ಯೇಕ ಏರ್ಪಾಡೂ ಮಾಡಬೇಕಾಗುವುದಿಲ್ಲ. ಈ ಕಾನೂನಿನಲ್ಲಿ ಅರ್ಹತೆಯಿರುವ ನಿಪುಣರನ್ನು ರೆವೆನ್ಯೂ ಬೋರ್ಡಿಗೆ ನೇಮಿಸಲು ಅವಕಾಶ ಮಾಡಿ ಅಪೆಲೇಟ್ ಜ್ಯೂರಿಸ್‌ಡಿಕ್ಷನ್ ಆ ಬೋರ್ಡಿಗಿರುವಂತೆ ಮಾಡಿದರೆ ಆಗ ಪ್ರತ್ಯೇಕವಾಗಿ ಟ್ರಿಬ್ಯುನಲ್‌ಗೆ ಆಗುವ ಖರ್ಚನ್ನು ಉಳಿಸಬಹುದು ಎಂದು ಈ ಕೆಲವು ನಲಹೆಗಳನ್ನು ಅವಗಾಹನೆಗೆ ತರುತ್ತೇನೆ.

*Sri F. H. MOHSIN (Hubli City).—Mr. Speaker, Sir, the Finance Minister deserves all congratulation for introducing this Bill. When he toured Bombay Karnataka Districts, it was represented to him by the merchants of that area, that there was urgent necessity to bring forward such a measure. There is double disadvantage in that area because in addition to the multi-points that we pay, there is the inter-State problem also. The Finance Minister has rightly felt the pulse of those merchants and has introduced this Bill as early as possible. But, by seeing Schedule III, I feel that he should have included some more items also under the list of exemption. Sir, Hubli City is mainly a city of labourers and manufacturers. Nearly 8,000 to 10,000 persons maintain themselves by preparing utensils of brass and copper. They prepare them by their own hands and sell them to bigger merchants, who in turn export them to other places. By imposing sales-tax on that industry, we would be hampering the growth of that industry. In order to encourage that industry, I request the Finance Minister to exempt the vessels made of copper and brass from this taxation. They had represented this to the Finance Minister and their representation is still with him. He has rightly exempted certain industries which are considered to be cottage industries. These vessels are also made by hand and not by machines. So, there is no reason why it should not be considered as cottage industry and exemption given.

The other article which, in my opinion, deserves exemption from this sales tax is chillies. My friend Sri Koujalgi has already advocated for this article being exempted. The Finance Minister was kind enough to exempt food stuffs from sales-tax. Mr. Speaker, Sir, this article chilly is also an essential commodity and it is one of the food stuffs. It is required by each and every individual. It is mostly grown in Ranibennur taluk and in some parts of Chitaldrug. And, what is the income from this source? Considering the small income from this source, I feel chillies should be exempted from sales-tax. I hope the Finance Minister will reconsider this item and exempt this commodity from the imposition of sales-tax. With these observations, I support the Bill, Sir.

Mr. SPEAKER.—The House will now rise for lunch and meet after half-an-hour.

The House rose at Two of the Clock for lunch and reassembled at Thirty Minutes Past Two of the Clock.

[MR. SPEAKER in the Chair]

ಶ್ರೀ ಜೆ. ಎಲ್. ಕಬಾಡಿ (ಇಂಡಿ-ಅನುಸೂಚಿತ ಜಾತಿಗಳು).—ಮಾನ್ಯ ಅಧ್ಯಕ್ಷರೇ, ಈಹೊತ್ತು ನಮ್ಮ ಮುಂದೆ ಬಂದಿರತಕ್ಕ ಈ ಸೇಲ್ಸ್‌ಟ್ಯಾಕ್ಸ್ ಬಿಲ್ಲನ್ನು ನಾನು ಸ್ವಾಗತಿಸುತ್ತೇನೆ. ಮಾನ್ಯ ಹಣಕಾಸಿನ ಸಚಿವರು ಕೆಲವು ಐಟಂಗಳಿಗೆ ತೆರಿಗೆಗಳನ್ನು ಹಾಕಲು ನಮ್ಮ ಮುಂದೆ ಇಟ್ಟಿದ್ದಾರೆ. ಷೆಡ್ಯೂಲ್ Iರಲ್ಲಿ 35ನೆಯ ಐಟಂ Leather manufactures other than footwear ಬಾಬತ್ತಿಗೆ, ಶೇಕಡ ಮೂರರರಂತೆ ಟರ್ನ್‌ಓವರ್ ಮೇಲೆ ತೆರಿಗೆಯನ್ನು ವಿಧಿಸಿದ್ದಾರೆ. ಈ ಹೊತ್ತು ಒಬ್ಬ ವ್ಯಾಪಾರಸ್ಥನು ಯಾವ ವ್ಯಾಪಾರವನ್ನೇ ಮಾಡುತ್ತಾ ಇರಲಿ ಅವನಿಗೆ ಐದು-ಆರು ಸಾವಿರ ರೂಪಾಯಿಗಳಷ್ಟು ಟರ್ನ್‌ಓವರ್ ಇದ್ದರೆ ಅವನು ಒಂದು ರೀತಿ ರೇಟ್ ಆಫ್ ಟ್ಯಾಕ್ಸ್ ಕೊಡಬೇಕೆಂದು ಇದರಲ್ಲಿ ಕಾಣಿಸಿದೆ. ಇದರಿಂದ ಸಾಧಾರಣ ಚರ್ಮಗಾರನಿಗೆ ಬಹಳ ತೊಂದರೆಯಾಗುತ್ತದೆ.

ಶ್ರೀ ಟಿ. ಮರಿಯಪ್ಪ.—ತಾವು ಹಳೆಯ ಮೈಸೂರು ಕಾನೂನನ್ನು ಓದಿದರೆ ಅದರಲ್ಲಿ ಬರಿಯ ಚಪ್ಪಲ್ಸ್ ಎಂದು ಇದೆ. ಈಗ ಇಲ್ಲಿ ಲೆದರ್ ಮ್ಯಾನ್ಯುಫಾಕ್ಚರ್ಸ್‌ಗೆ ಮಾತ್ರ ಟ್ಯಾಕ್ಸ್ ಹಾಕಿದ್ದೇವೆ. ಆದ್ದರಿಂದ ಷಡ್ಯೂಲ್ (1) ರಲ್ಲಿರುವ ಟ್ಯಾಕ್ಸು ಚಪ್ಪಲಿ, ಬೂಟ್ಸ್ ಮತ್ತು ಪಂಪ್‌ಷೂ, ಇವುಗಳು ಯಾವುದರ ಮೇಲೂ ಬೀಳುವುದಿಲ್ಲ. ಫುಟ್‌ವೇರ್‌ಗಳಿಗೆ ಅದಷ್ಟು ರಿಯಾಯ್ತಿ ಕೊಟ್ಟಿದೆ.

ಶ್ರೀ ಕಬಾಡಿ.—ಐದು ಸಾವಿರ ರೂಪಾಯಿಗಳಿಂದ ಹತ್ತು ಸಾವಿರದ ವರೆಗೆ ವ್ಯಾಪಾರ ಮಾಡುವಂಥವರಿಗೆ ಈ ಹೊತ್ತು ಚಪ್ಪಲಿ ಗೂಡ್ಸ್ ಟರ್ನ್‌ಓವರ್ ಮೇಲೆ ಟ್ಯಾಕ್ಸು ಬೀಳುತ್ತದೆ. ಈ ಬಿಲ್ಲಿನ ಸೆಕ್ಷನ್ ಐದರ ಪ್ರಕಾರ 15 ಸಾವಿರ ಟರ್ನ್ ಓವರ್‌ವರೆಗೂ ಅರ್ಧ ಪರ್ಸೆಂಟ್ ಮತ್ತು 15 ಸಾವಿರದಿಂದ 30 ಸಾವಿರದವರೆಗೆ ಒಂದು ಪರ್ಸೆಂಟ್ ರೇಟ್ ಆಫ್ ಟ್ಯಾಕ್ಸ್‌ನ್ನು ಕೊಡಬೇಕಾಗುತ್ತದೆ ಎಂದು ಹೇಳಿದ್ದಾರೆ. ಸೆಕ್ಷನ್ 5 (b) ಪ್ರಕಾರ ಷೆಡ್ಯೂಲ್ ಒಂದರಲ್ಲಿ ಹೇಳಿರುವಂತೆ ಲೆದರ್ ಮ್ಯಾನ್ಯುಫ್ಯಾಕ್ಚರ್ಸ್ ಗುಡ್ಸ್‌ಗಳಿಗೆ ಟರ್ನ್‌ಓವರ್ ಮೇಲೆ ಶೇಕಡ 3ರಂತೆ ತೆರಿಗೆಯನ್ನು ಕೊಡಬೇಕಾಗಿದೆ. ಷೆಡ್ಯೂಲ್ 1ರ ಪ್ರಕಾರ ಫುಟ್‌ವೇರ್ ಮೇಲೆ ಟ್ಯಾಕ್ಸ್ ಇಲ್ಲ. ಲೆದರ್ ಮ್ಯಾನ್ಯುಫ್ಯಾಕ್ಚರ್ ಟರ್ನ್‌ಓವರ್ ಮೇಲೆ ತೆರಿಗೆ ಇದೆ. ಟರ್ನ್‌ಓವರ್ ಎಂದು ಹತ್ತು ತರಹ ಸಾಮಾನುಗಳನ್ನು ಇಟ್ಟುಕೊಂಡು ವ್ಯಾಪಾರ ಮಾಡಿದರೆ ಆಗ ಅದರ ಮೇಲೂ ತೆರಿಗೆ ಬೀಳುತ್ತದೆ. ಇದರಿಂದ ಏನಾಯಿತಿ ಮಾಡಿದ್ದಾರೆ ಎಂದು ಹೇಳಿದ ಹಾಗಾಗುವುದಿಲ್ಲ.

ಶ್ರೀ ಟಿ. ಮರಿಯಪ್ಪ.—ಷೆಡ್ಯೂಲ್ 1ರ ಪ್ರಕಾರ ಫುಟ್‌ವೇರಿಗೆ ಟ್ಯಾಕ್ಸ್ ಬೀಳುವುದಿಲ್ಲ.

ಶ್ರೀ ಜೆ. ಎಲ್. ಕಬಾಡಿ.—ಅಂದರೆ ಟರ್ನ್‌ಓವರ್ ಮೇಲೆ ಬೀಳುತ್ತದೆ ಎಂದು ಅರ್ಥವಾಯಿತು.

ಶ್ರೀ ಟಿ. ಮರಿಯಪ್ಪ.—ಇದು ಒಂದೇ ಅಲ್ಲ, ಎಲ್ಲಾ ಸಾಮಾನುಗಳೂ ಸೇರುತ್ತವೆ.

ಶ್ರೀ ಜೆ. ಎಲ್. ಕಬಾಡಿ.—ಈ ಹೊತ್ತು ಇಂಡಿಯಾ ಸರ್ಕಾರದವರು ಯಾವಾಗ ಲೆದರ್ ಇಂಡಸ್ಟ್ರೀಸನ್ನು ಸಹ ಕಾಟೇಜ್ ಇಂಡಸ್ಟ್ರೀಸ್‌ಗಳಲ್ಲಿ ಒಂದು ಎಂಬುದಾಗಿ ಡಿಕ್ಲೇರ್ ಮಾಡಿರುವಾಗ ಅದೂ ಕೂಡ ಈಗ ಕಾಟೇಜ್ ಇಂಡಸ್ಟ್ರೀಸ್ ಒಳಗೆ ಸೇರುತ್ತದೆ. ಕಾಟೇಜ್ ಇಂಡಸ್ಟ್ರೀಸ್‌ಗೆ ಯಾವ ರೀತಿ ಟ್ಯಾಕ್ಸ್ ಎಗ್ಸೆಂಪ್ಷನ್ ಕೊಟ್ಟಿದ್ದಾರೋ ಅದೇ ರೀತಿ ಈ ಲೆದರ್ ಇಂಡಸ್ಟ್ರೀಸ್‌ನ್ನೂ ಎಗ್ಸೆಂಪ್ಟ್ ಮಾಡಬೇಕು ಎಂದು ನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಟಿ. ಮರಿಯಪ್ಪ.—ಆ ಸೂಚನೆ ಈಗ ಬಂದಿದೆ. ಖಾದಿ ಮತ್ತು ವಿಲೇಜ್ ಇಂಡಸ್ಟ್ರೀಸ್ ಬೋರ್ಡಿನಲ್ಲಿ ಇದನ್ನು ಕಾಟೇಜ್ ಇಂಡಸ್ಟ್ರಿ ಎಂದು ರಿಕಗ್ನೈಜ್ ಮಾಡಿದರೆ ಅದನ್ನು ವಿನಾಯಿತಿ ಮಾಡುವುದಕ್ಕೆ ಯಾವ ಅಭ್ಯಂತರವೂ ಇಲ್ಲ.

ಶ್ರೀ ಜೆ. ಎಲ್. ಕಬಾಡಿ.—ಕೆಲವು ಕಡೆ ವಿಲೇಜ್ ಇಂಡಸ್ಟ್ರೀಸ್‌ಗಳಲ್ಲಿ ಚಪ್ಪಲ್ಸ್ ಇತ್ಯಾದಿ ಫುಟ್‌ವೇರ್‌ಗಳನ್ನು ತಯಾರು ಮಾಡುತ್ತಾರೆ. ಓಣಿಓಣಿಯಲ್ಲಿಯೂ ತಯಾರು ಮಾಡುತ್ತಾರೆ. ಇದರಲ್ಲಿ 5,000ಕ್ಕೆ ಮೀರಿ ಟರ್ನ್‌ಓವರ್ ಇರುವವರು ಟ್ಯಾಕ್ಸು ಕೊಡಬೇಕು ಎಂದಿದೆ, ಆದರೆ ಅವರಿಗೆ ಶಕ್ತಿ ಇರುವುದಿಲ್ಲ. ಟರ್ನ್‌ಓವರ್ ಮೇಲೆ ತೆರಿಗೆಯನ್ನು ಅವರಿಗೆ ಬರುವ ಉತ್ಪತ್ತಿಯಲ್ಲಿ ಅವರು ಹೇಗೆ ಕೊಡಬೇಕು ?

ಶ್ರೀ ಟಿ. ಮರಿಯಪ್ಪ.—ಷೆಡ್ಯೂಲ್ ಒಂದರಲ್ಲಿ ಫುಟ್‌ವೇರ್ಸ್ ಮೇಲೆ ಟರ್ನ್‌ಓವರ್ ಮೇಲೆ ಟ್ಯಾಕ್ಸ್ ಹಾಕಿಲ್ಲ. ಶ್ರೀ ಭೀಮಪ್ಪನಾಯಕರು ಒಂದು ತಿದ್ದುಪಡಿ ನೂಚನೆ ಮಾಡಿದ್ದಾರೆ. ಆ ನಂದರ್ಭದಲ್ಲಿ ಇದನ್ನು ಚರ್ಚೆ ಮಾಡಬಹುದು. ಈಗಿರತಕ್ಕ ಬಿಲ್ಲಿನಲ್ಲಿ ಶೇಕಡ ಅರ್ಧ, ಒಂದು, ಒಂದೂವರೆ, ಎರಡರ ಹಾಗೆ ರೇಟ್ ಆಫ್ ಟ್ಯಾಕ್ಸಿನಂತೆ ಟರ್ನ್‌ಓವರ್ ಮೇಲೆ ತೆರಿಗೆ ಬೀಳುವ ಸಾಮಾನುಗಳು ಬೇರೆ. ಖಾದಿ ಮತ್ತು ವಿಲೇಜ್ ಇಂಡಸ್ಟ್ರೀಸ್ ಬೋರ್ಡಿನಿಂದ ಈ ಕೈಗಾರಿಕೆ ರಿಕಗ್‌ನೈಜ್ ಆಗಿ ಬಂದರೆ, ಈ ಪ್ರಾಡಕ್ಟ್‌ಗಳನ್ನು ಎಗ್ಸೆಂಪ್ಟ್ ಮಾಡುವ ಆಲೋಚನೆಯನ್ನು ಮಾಡುತ್ತೇವೆ. ಒಬ್ಬರು ನೂರು ಜನ ಆಳುಗಳನ್ನು ಇಟ್ಟುಕೊಂಡು ಫುಟ್‌ವೇರ್‌ಗಳನ್ನು ತಯಾರು ಮಾಡಿದರೆ ಅದಕ್ಕೆ ಷೆಡ್ಯೂಲ್ 1ರ ಪ್ರಕಾರ ತೆರಿಗೆ ಬೇಡ ಎಂದರೆ ಟರ್ನ್‌ಓವರ್ ಒಂದು ಲಕ್ಷ, ಎರಡು ಲಕ್ಷ ಮಾಡುವವರಿಗೆ ತೆರಿಗೆ ಬೇಡ ಎಂದರೆ ಹೇಗೆ ?

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಈಗ ಶ್ರೀ ಭೀಮಪ್ಪನಾಯಕರು ಏನೆಂದು ತಿದ್ದುಪಡಿಯನ್ನು ತಂದಿದ್ದಾರೆ ?

ಶ್ರೀ ಟಿ. ಮರಿಯಪ್ಪ.—ಅವರು ಮಾತನಾಡುವಾಗ ಅದನ್ನು ಸೂಚನೆ ಮಾಡುತ್ತಾರೆ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಕೆಲವರು ಸರ್ಕಾರದ ತಿದ್ದುಪಡಿಗೆ ಇನ್ನೊಂದು ತಿದ್ದುಪಡಿಯನ್ನು ತಂದಿದ್ದಾರೆ ಎಂದು ಹೇಳುತ್ತಾರೆ. ಅಮೆಂಡ್‌ಮೆಂಟಿಗೆ, ಅಮೆಂಡ್‌ಮೆಂಟೇ ತಂದ ಹಾಗಾಯಿತು. ಇದರಲ್ಲಿ ಏನಾದರೂ ಅರ್ಥವಿದೆಯೇ ?

ಶ್ರೀ ಜೆ. ಎಲ್. ಕಬಾಡಿ.—ತಾವು ಹೇಳಿದ ಪ್ರಕಾರ ಹತ್ತು ಜನರಿಗೆ ಮೇಲ್ಪಟ್ಟು ಸಿಬ್ಬಂದಿಯನ್ನಿಟ್ಟುಕೊಂಡು ಒಂದು ಉದ್ಯಮವನ್ನು ಯಾರು ನಡೆಸುತ್ತಿದ್ದಾರೋ ಅವರಿಗೆ ಬೇಕಾದರೆ ಹಾಕಿ. ಹಾಗಿಲ್ಲದೆ ಕೇವಲ ಗೃಹ ಕೈಗಾರಿಕೆಯಾಗಿಟ್ಟುಕೊಂಡು ತಯಾರು ಮಾಡುವ ಮಾಲನ್ನು ಮಾರಾಟಮಾಡಿ ಜೀವನ ಮಾಡುತ್ತಿರುವವರಿಗೆ ವಿನಾಯಿತಿ ಕಲ್ಪಿಸಿಕೊಡುವುದು ಸೂಕ್ತವಾಗಿದೆ. ಇನ್ನೊಂದೇನೆಂದರೆ, ಈಗ ಕೆಲವು ಕಡೆ ಉದಾಹರಣೆಗೆ ಬೊಂಬಾಯಿ ಪ್ರಾಂತ್ಯದಲ್ಲಿ ಏನು ಮಾಡಿದ್ದಾರೆಂದರೆ, ಯಾವ ವಸ್ತುವನ್ನು ನಾಲ್ಕೂವರೆ ರೂಪಾಯಿಗೆ ಮೇಲ್ಪಟ್ಟ ದರದಲ್ಲಿ ಮಾರಾಟ ಮಾಡಿದರೆ, ಅಂಥ

ವನ್ನು ಏನ ಮೇಲೆ ರೂಪಾಯಿಗೆ ಆರು ಕಾಸಿನಂತೆ ತೆರಿಗೆ ಹಾಕಬೇಕೆಂದು ಗೊತ್ತುಮಾಡಿದ್ದಾರೆ. ಅದಕ್ಕಿಂತ ಕಡಮೆ ಬೆಲೆಗೆ ಮಾರಿದರೆ ತೆರಿಗೆಯನ್ನೇ ಹಾಕುವುದಿಲ್ಲ. ಇದರಿಂದಾಗಿ ಬಡಜನರಿಗೆ ಬಹಳ ಅನುಕೂಲವಾಗುತ್ತದೆ. ಅದೇ ರೀತಿಯ ಒಂದು ಏರ್ಪಾಡನ್ನು ತಾವೂ ಮಾಡಬೇಕೆಂದು ನಾನು ಸೂಚಿಸುತ್ತೇನೆ.

Business of the House.

ಅಧ್ಯಕ್ಷರು.—ಸದ್ಯಕ್ಕೆ ಈ ಚರ್ಚೆಯನ್ನು ನಿಲ್ಲಿಸೋಣ. ಈಗ ಅರ್ಧ ಗಂಟೆಯ ಕಾಲ ಚರ್ಚಿಸಬೇಕಾದ ಪ್ರಶ್ನೆಯನ್ನು ಚರ್ಚೆಗೆ ತೆಗೆದುಕೊಂಡು ಅದು ಮುಗಿದ ಅನಂತರ ಇಂದಿಗೆ ಸಭೆಯನ್ನು ಮುಕ್ತಾಯಗೊಳಿಸೋಣ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ನನ್ನದೊಂದು privilege motion ಇತ್ತು. ಅದರ ವಿಷಯ ವೇನೂ ತಾವು ಹೇಳಲಿಲ್ಲ.

ಅಧ್ಯಕ್ಷರು.—ತಾವು ಪ್ರಿವಿಲೇಜ್‌ಗೆ ಸಂಬಂಧಪಟ್ಟ ಸೂಚನೆಯೆಂದು ಯಾವುದನ್ನು ಕೊಟ್ಟಿದ್ದೀರೋ ಅದನ್ನು privilege motion ಎಂದು ಪರಿಗಣಿಸುವುದಕ್ಕಾಗುವುದಿಲ್ಲ. ಏನಿದ್ದರೂ Official Secrets Actಗೆ ವ್ಯತಿರಿಕ್ತವಾದ ನಡೆವಳಿಕೆಯೆಂದು ಮಾತ್ರ ಭಾವಿಸಬಹುದು ಅಷ್ಟೆ. ಆದ್ದರಿಂದ ಅದನ್ನು ಈ ಸಭೆಯಲ್ಲಿ ತೆಗೆದುಕೊಳ್ಳದೆ ಒಂದು ಕಾಗದದ ಮುಖೇನ ಉತ್ತರ ಕೊಟ್ಟು ಮುಗಿಸಬೇಕೆಂದು ನಾನು ಇಚ್ಛೆಪಡುತ್ತೇನೆ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಇಂಗ್ಲೆಂಡಿನಲ್ಲಿ ಪಾರ್ಲಿಮೆಂಟಿನಲ್ಲಿ ಕೂಡ ಇಂಥದೇ ರೀತಿಯಲ್ಲಿ Breach of Parliament ನಡೆದು ಆ ಬಗ್ಗೆ ಮಂತ್ರಿಗಳು apology ಕೊಡುವ ಸಂದರ್ಭ ಬಂದಿತ್ತು.

ಅಧ್ಯಕ್ಷರು.—ತಾವು Dalton's Case ಸಂಬಂಧವಾಗಿ ಹೇಳುತ್ತಿರಬಹುದು. ಅದೂ Breach of Privilege ಆಗಲಿಲ್ಲ. ಅದನ್ನು ಕೂಡ Breach of Official Secrets Act ಆಗಿ ಪರಿಗಣಿಸಿದರು ಅಷ್ಟೆ. ಅದರ ಮೇಲೆ apology ಕೊಡಲಾಯಿತು. ಅದೇನೂ ಸಭೆಯ ಮುಂದೆ privilege motion ರೂಪದಲ್ಲಿ ಬರಲಿಲ್ಲ.

ಶ್ರೀ ಟಿ. ಮರಿಯಪ್ಪ.—Motor Spirits Act ಎಂಬ ಒಂದೇ ಒಂದು ಕಲಮಿರುವ ತಿದ್ದುಪಡಿಯ ಮಸೂದೆಯಿದೆ. ಸದಸ್ಯರನ್ನು ಕೇಳಿದ್ದರಲ್ಲಿ ಅದನ್ನು ಆಲೋಚನೆ ಮಾಡಬಹುದು ಎಂದು ಹೇಳಿದ್ದಾರೆ. ಈಗ ಮಾನ್ಯ ಸದಸ್ಯರು ಅದನ್ನು ಪರ್ಯಾಲೋಚನೆಗೆ ತೆಗೆದುಕೊಳ್ಳಬಹುದೆಂದರೆ ನನ್ನ ಸೂಚನೆಯನ್ನು ಸಭೆಯ ಮುಂದಿಡ ತ್ತೇನೆ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಇದಾದ ಮೇಲೆ ಬೇಕಾದರೆ ಅದನ್ನು ತೆಗೆದುಕೊಳ್ಳಬಹುದು.

ಅಧ್ಯಕ್ಷರು.—ಯಾವುದೇ ಒಂದು ಬಿಲ್ಲನ್ನು ನಿಲ್ಲಿಸಿ ಮತ್ತೊಂದು ಬಿಲ್ಲನ್ನು ಚರ್ಚೆಗೆ ತೆಗೆದುಕೊಳ್ಳುವುದು ಅನಾವಶ್ಯಕ. ಎಷ್ಟೋ ವೇಳೆ Complicated matters ಎನ್ನುವಂಥವೂ ಸುಲಭವಾಗಿಬಿಡುತ್ತವೆ. ಹಾಗೆಯೇ ಸುಲಭವೆನ್ನುವಂಥವೂ ಕಷ್ಟವಾಗಿ ಪರಿಣಮಿಸಬಹುದು.

ಸದ್ಯಕ್ಕೆ ಅರ್ಧ ಗಂಟೆಯ ಸೂಚನೆಯನ್ನು ತೆಗೆದುಕೊಳ್ಳೋಣ. ಅದರ ಮೇಲೆ ಮಾತನಾಡಬಹುದು.

HALF-AN-HOUR DISCUSSION

on Q. No. 221, re Grant of Lands to Political Sufferers.

Sri Y. VEERAPPA (Holenarsipur).—I would like to raise a discussion with reference to Question 221 which was debated on the floor of the House on 12th June 1957. This is a matter pertaining to the granting of lands to political sufferers. As could be seen from the answers printed and as could be read from the papers given by the Hon'ble Minister, it appears to me that no opportunity or proper information or comprehensive information is furnished with reference to sub-questions pertaining to main question 221. In this connection I want to know from the Government whether there was a list of political sufferers prepared, and if so, was the list prepared Districtwise, who were the people that prepared the list, and in the list prepared, I want to know from the Government whether non-political sufferers were also included. Further, I want to elicit from the Government as to what was the basis on which they prepared the list and whether they granted lands to those—whether they be political sufferers or non-political sufferers—who had already possessed lands. As could be seen from the answers, it looks as if the Government is evading to give clear answers to those questions. For example, with reference to question (1) they state that 'No such committee has been constituted'. But in the latter part of the explanation it is said that the Government have decided to revise the list of political sufferers. That means a list has been prepared. If the list has been prepared, I want to know whether both the political and non-political sufferers are included in the list and whether they have granted lands to the people who already possessed of lands and what are the policy and principle adopted by the Government to prepare such a list. Therefore, in view of the fact that a very doubtful answer was furnished, I want these clarifications from the Government.

Sri T. MARIAPPA (Minister for Finance).—Sir, I am afraid the Hon'ble